ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2015 ಮಾಸ ಪತ್ರಿಕೆ

ಸಂಪುಟ : 37
ಸಂಚಿಕೆ : 4
ಪುಟ : 12
ಬೆಲೆ : ₹ 5/-



## 66 ನೇ ಗಣರಾಜ್ಯೋತ್ಸವದ ಶುಭಾಶಯಗಳು

ಗಣರಾಜ್ಯ ದಿನಾಚರಣೆಯ ಸಂಭ್ರಮ 3

ಗೆಲುವಿನ ಗುಟ್ಟು 8

ಗಣಿತ ಬೋಧನೆಯಲ್ಲಿ ಮೌಲ್ಯಗಳ ಅಳವಡಿಕೆ 5

A Journal of Karnataka State Secondary Teachers' Association

# ಸಂಪಾದಕೀಯ

ಎಲ್ಲಾ ಶಿಕ್ಷಕ ಮಿತ್ರರಿಗೂ, ವಿದ್ಯಾರ್ಥಿಗಳಿಗೂ ಹಾಗೂ ನಮ್ಮ ಶಿಕ್ಷಕ ಸಮಾಚಾರದ ಎಲ್ಲಾ ಚಂದಾದಾರರಿಗೂ 'ಸಂಕ್ರಾಂತಿ' ಹಬ್ಬದ ಶುಭಾಶಯಗಳು, ಸಂಕ್ರಾಂತಿ ಹಬ್ಬದ ಆಚರಣೆಯ ಆಶಯದಂತೆ ಎಳ್ಳು ಬೆಲ್ಲ ಹಂಚಿದ್ದೇವೆ. ಹಾಗೆಯೇ ಒಳ್ಳೆಯ ಮಾತನ್ನು, ಮನಸ್ಸನ್ನು ಮುಂದುವರಿಸೋಣ.

ಕನ್ನಡ ಸಾಹಿತಿಗಳ ಪ್ರತಿಭೆ ಅನನ್ಯ. ಅಪ್ರತಿಮ. ಇದಕ್ಕೆ ಸಾಕ್ಷಿ ಕನ್ನಡ ಸಾಹಿತ್ಯಕ್ಕೆ, ಸಾಹಿತಿಗಳಿಗೆ ಸಲ್ಲುವ ಗೌರವ, ಪ್ರಶಸ್ತಿಗಳು. ಈಗಾಗಲೇ ಕನ್ನಡ ೮ ಜ್ಞಾನಪೀಠವನ್ನು ಮುಡಿಗೇರಿಸಿಕೊಂಡಿದೆ. ಈಗ ಕನ್ನಡಿಗರೆಲ್ಲರೂ ಹೆಮ್ಮೆಯಿಂದ ಬೀಗುವ ಇನ್ನೊಂದು ಗರಿ ಕನ್ನಡ ಸಾಹಿತ್ಯ ಸರಸ್ವತಿಯ ಮುಡಿಯೇರಿದೆ. ನಾಡಿನ ವಿಶಿಷ್ಟ ಕಾದಂಬರಿಕಾರ ಡಾ॥ ಎಸ್.ಎಲ್.ಭೈರಪ್ಪನವರನ್ನು 'ರಾಷ್ಟ್ರೀಯ ಪ್ರಾಧ್ಯಾಪಕ' ರೆಂದು ಕೇಂದ್ರ ಸರ್ಕಾರ ಗೌರವಿಸಿದೆ. ಇದು ಕನ್ನಡಿಗರೊಬ್ಬರಿಗೆ ಮೊದಲಿಗೆ ಸಂದಿರುವ ಗೌರವವಾಗಿದೆ. ಈ ವಿಶಿಷ್ಟ ಗೌರವಕ್ಕೆ ಪಾತ್ರರಾದ ಡಾ॥ ಎಲ್.ಎಲ್.ಭೈರಪ್ಪನವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಾಗೂ ಶಿಕ್ಷಕ ಸಮಾಚಾರದ ಸಂಪಾದಕರ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ರಾಜ್ಯದಲ್ಲಿ ಪ್ರಮುಖವಾಗಿ ೩ ವರ್ಗದ ಶಿಕ್ಷಕರಿದ್ದಾರೆ. ಸರ್ಕಾರಿ ಶಾಲಾ ಶಿಕ್ಷಕರು; ಅನುದಾನಿತ ಶಾಲಾ ಶಿಕ್ಷಕರು ಹಾಗೂ ಅನುದಾನ ರಹಿತ ಶಾಲಾ ಶಿಕ್ಷಕರು. ಇವರಲ್ಲಿ ಅತಂತ್ರರೆಂದರೆ ಅನುದಾನಿತ ಶಿಕ್ಷಕ ಸಮೂಹವೆಂದರೆ ತಪ್ಪಾಗಲಾರದು. ಕಾರಣ ಸರ್ಕಾರ ಅವರಿಗೆ ಸಂಬಳ ನೀಡುತ್ತದೆ. ಆದರೆ ಇತರೆ ಸವಲತ್ತುಗಳ ವಿಚಾರದಲ್ಲಿ ಸರ್ಕಾರ ಅವರನ್ನು ಸರ್ಕಾರಿ ಶಾಲಾ ಶಿಕ್ಷಕರಿಗೆ ಸಮಾನವಾಗಿ ಪರಿಗಣಿಸುವುದಿಲ್ಲ. ಆದರೆ ಬಾಧ್ಯತೆಯಲ್ಲಿ ಅನುದಾನಿತ ಶಿಕ್ಷಕರ ಜವಾಬ್ದಾರಿ ಸ್ವಲ್ಪವೂ ಕಡಿಮೆಯಲ್ಲ. ಕನ್ನಡ ಮುಂಬಡ್ತಿಯನ್ನು ಅರ್ಹ ಅನುದಾನಿತ ಶಿಕ್ಷಕರಿಗೂ ನೀಡಬೇಕೆಂದು ರಾಜ್ಯ ಹೈಕೋರ್ಟ್, ಸುಪ್ರಿಂಕೋರ್ಟ್ ಸರ್ಕಾರಕ್ಕೆ ಆದೇಶಿಸಿತು. ಆದರೆ ಅದಕ್ಕೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆಂಬ ಕಾರಣದಿಂದ ಈಗ ಕರ್ನಾಟಕ ಶಿಕ್ಷಣ ವಿಧೇಯಕವನ್ನು ತಂದು ಬಡ್ತಿ ವಂಚಿತರನ್ನಾಗಿಸುತ್ತಿದೆ. ಅಷ್ಟೇ ಅಲ್ಲ, ಈ ವಿಧೇಯಕದಿಂದ ಅನುದಾನಿತ ಶಾಲಾ ನೌಕರರಿಗೆ ಅನೇಕ ಸವಲತ್ತುಗಳು ಕಡಿತವಾಗಲಿದೆ ಎಂಬ ಅನುಮಾನ ಬಲವಾಗಿದೆ. ಇಂತಹ ಶಿಕ್ಷಕ ವಿರೋಧಿ ಕ್ರಮಗಳನ್ನು ಕೈಬಿಟ್ಟು ಎಲ್ಲಾ ಶಿಕ್ಷಕರಿಗೂ ನವೀನ ಸವಲತ್ತುಗಳನ್ನು ಒದಗಿಸುವತ್ತ ಸರ್ಕಾರ ಮನಸ್ಸು ಅವಶ್ಯವಾಗಿ ಮಾಡಬೇಕು.

ಸಂಪಾದಕರು

## ಸೂಕ್ತಿ

ಉನ್ನತ ಆಲೋಚನೆಗಳಿಂದ, ಅತ್ಯುನ್ನತ ಆದರ್ಶಗಳಿಂದ ನಿಮ್ಮ ಮಿದುಳನ್ನು ತುಂಬಿ; ಅವುಗಳನ್ನು ಹಗಲಿರುಳೂ ನಿಮ್ಮ ಮುಂದಿರಿಸಿಕೊಳ್ಳಿ. ಇದರಿಂದ ಮಹತ್ಕಾರ್ಯ ಉದ್ಭವಿಸುತ್ತದೆ.

- ಸ್ವಾಮಿ ವಿವೇಕಾನಂದ

## ಪರಿವಿಡಿ


- ಗಣರಾಜ್ಯ ದಿನಾಚರಣೆಯ ಸಂಭ್ರಮ 3
- ಸಂಕ್ರಾಂತಿ 4
- ಗಣಿತ ಬೋಧನೆಯಲ್ಲಿ ಮೌಲ್ಯಗಳ ಅಳವಡಿಕೆ 5
- ಸಂಘದ ವಾರ್ತೆ 6
- ಗೆಲುವಿನ ಗುಟ್ಟು 8
- ಮಹಿಳಾ ವಿಭಾಗದಿಂದ ಜೀವನಮೌಲ್ಯಗಳ ಅನಾವರಣ 9
- ವಿದ್ಯಾರ್ಥಿ ಮಿತ್ರ – 15 10
- ಸಾಧಕರನ್ನು ಸ್ಮರಿಸೋಣ 11


## ಸಂಕ್ರಾಂತಿಯ ಶುಭಾಶಯಗಳು



# ಗಣರಾಜ್ಯ ದಿನಾಚರಣೆಯ ಸಂಭ್ರಮ

ನಂ. ನಾಗಲಕ್ಷ್ಮಿ

1929 ಡಿಸೆಂಬರ್ 31 ರ ಮಧ್ಯರಾತ್ರಿ ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ತ್ವದ ಕಾಲ. ಲಾಹೋರ್‌ನಲ್ಲಿ ಅಂದು ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಸಭೆಯಲ್ಲಿ ಗಣತಂತ್ರ ರಾಷ್ಟ್ರವೆಂಬ ಪರಿಕಲ್ಪನೆಗೆ ಅಂಕುರಾರ್ಪಣೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಪಂ. ಜವಹರಲಾಲ್ ನೆಹರು ವಹಿಸಿದ್ದರು. ಅಂದು ಕಂಡ ಕನಸು ಎರಡು ದಶಕಗಳ ಸುದೀರ್ಘ ಪಯಣದ ನಂತರ ಸಾಕಾರಗೊಂಡದ್ದು 1950 ರಲ್ಲಿ.

1946, ಡಿಸೆಂಬರ್ 9 ರಂದು ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳು ಮತ್ತು ನಮ್ಮ ರಾಷ್ಟ್ರನಾಯಕರು ಸೇರಿ ಮಹತ್ತ್ವದ ವಿಷಯವೊಂದರ ಕುರಿತು ಸಮಾಲೋಚನೆ ನಡೆಸಿದ್ದರು. ಅದೇನೆಂದರೆ, ಭಾರತಕ್ಕೆ ಒಂದು ಉತ್ತಮವಾದ ಸಂವಿಧಾನವನ್ನು ಸಿದ್ಧಪಡಿಸಬೇಕೆಂಬುದು. ಹಾಗೆ ರೂಪಿಸಿದ ಸಂವಿಧಾನವನ್ನು ವಿವಿಧ ಆಯಾಮಗಳಿಂದ ಕೂಲಂಕಷವಾಗಿ ಪರಿಶೀಲಿಸಲು ಅನೇಕ ಸಮಿತಿಗಳನ್ನು ರಚಿಸಲಾಯಿತು. ಆ ಸಮಿತಿಗಳು ನೀಡಿದ ಸೂಚನೆಗಳನ್ನು ಕುರಿತು ಮತ್ತೆ ಮತ್ತೆ ಚರ್ಚಿಸಲಾಯಿತು. ಅಗತ್ಯ ಕಂಡ ಬದಲಾವಣೆಗಳನ್ನು ಮಾಡಲಾಯಿತು. ಪದೇ ಪದೇ ಸುಧಾರಣೆಗಳನ್ನೂ ಮಾಡಲಾಯಿತು. 1949 ರ ನವೆಂಬರ್ 26 ರಂದು ಅಧಿಕೃತವಾಗಿ ಭಾರತೀಯ ಸಂವಿಧಾನದ ರೂಪವನ್ನು ಸ್ವೀಕರಿಸಲಾಯಿತು. ಆದರೂ ಅದು ಸಂಪೂರ್ಣವಾಗಿ ಒಂದು ಸ್ವತಂತ್ರ ಸಂವಿಧಾನವೆಂದು (ಪೂರ್ಣ ಪ್ರಮಾಣದಲ್ಲಿ) ಆಡಳಿತಾತ್ಮಕವಾಗಿ ಘೋಷಣೆಯಾದ್ದು 1950, ಜನವರಿ 26 ಪ್ರಪಂಚದ ಅತಿದೊಡ್ಡ ಸಂವಿಧಾನವೆನ್ನಲಾಗಿರುವ ಭಾರತದ ಸಂವಿಧಾನದ ಹುಟ್ಟು, ರಚನೆಯ ಹಿನ್ನೆಲೆ ಇದು.

ಸಂವಿಧಾನ ಭಾರತೀಯ ಪ್ರಜೆಗಳಿಗೆ ತಮಗೆ ಸೂಕ್ತವೆನಿಸಿದ್ದ ಸರ್ಕಾರವನ್ನು ಆಯ್ಕೆ ಮಾಡುವ ಅಧಿಕಾರದೊಂದಿಗೆ ಪ್ರಜಾಪ್ರಭುತ್ವಕ್ಕೆ ದಾರಿ ತೋರುತ್ತದೆ. ಸ್ವತಂತ್ರ ಭಾರತದ ಈ ಮಹತ್ತ್ವದ ಆಡಳಿತಾತ್ಮಕ ನಡೆಯ ಸ್ಮರಣಾರ್ಥವಾಗಿ ಪ್ರತಿ ವರ್ಷ ರಾಷ್ಟ್ರದಾದ್ಯಂತ ಯಾವ ಭೇದವಿಲ್ಲದೆ ಸಂಭ್ರಮಿಸುವ ಉತ್ಸವವೇ ಗಣರಾಜ್ಯ ದಿನಾಚರಣೆ. ದೇಶದ ಮೂರು ರಾಷ್ಟ್ರೀಯ ಹಬ್ಬಗಳಲ್ಲಿ ಇದೊಂದು 308 ಮಂದಿ ಸದಸ್ಯರ ಸಹಿಯೊಂದಿಗೆ ಸಿದ್ಧವಾದ ಈ ನಮ್ಮ ಸಂವಿಧಾನ ಇಂಗ್ಲಿಷ್ ಮತ್ತು ಹಿಂದೀ ಎರಡೂ ಭಾಷೆಗಳಲ್ಲಿದೆ.

ಗಣತಂತ್ರಾತ್ಮಕ ಆಡಳಿತವೆಂದರೆ ಪ್ರಜೆಗಳೇ ಆಡಳಿತ ನಡೆಸುವ ಕ್ರಮ. ಹಾಗಾಗಿ ಇಲ್ಲಿನ ಪ್ರತಿಯೊಬ್ಬ ಪ್ರಜೆ ತನ್ನ ರಾಷ್ಟ್ರದ ಸಂಸ್ಕೃತಿ, ಪರಂಪರೆಯ ಕುರಿತು ಗೌರವಾದರಗಳನ್ನು ಹೆಮ್ಮೆಯೊಂದಿಗೆ ಹೊಂದಿರಬೇಕಾದುದು ಅಗತ್ಯ. ದೇಶಕ್ಕಾಗಿ ತನ್ನನ್ನು ಮುಡಿಪಾಗಿಡುವೆನೆಂದು ಸ್ವಯಂ ಪ್ರಮಾಣ ಸ್ವೀಕರಿಸುವುದು ಅವಶ್ಯ. ದೇಶದ ರಕ್ಷಣೆಗಾಗಿ ಬಲಿದಾನ ಮಾಡಿದ ಅಸಂಖ್ಯಾತ ಹುತಾತ್ಮರ ತ್ಯಾಗವನ್ನು ಕೃತಜ್ಞತೆಯಿಂದ ಸ್ಮರಿಸುವುದು ಎಲ್ಲ ಪ್ರಜೆಗಳ ಮುಖ್ಯ ಕರ್ತವ್ಯ.

ಭಾರತದ ಈ ಚರಿತ್ರಾರ್ಹ ದಿನದ ಆಚರಣೆಯ ವಿಧಾನ, ವೈಭವ ವೈಶಿಷ್ಟ್ಯಪೂರ್ಣವಾಗಿದ್ದು ಪ್ರಪಂಚದಾದ್ಯಂತ ಎಲ್ಲರ ಗಮನವನ್ನು ಸೆಳೆಯುತ್ತದೆ. ರಾಜಧಾನಿ ದೆಹಲಿಯಲ್ಲಿ ಮತ್ತು ರಾಜ್ಯಗಳ ರಾಜಧಾನಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಕ್ಷಣಾ ಪಡೆಗಳ ಕವಾಯಿತು ನಡೆಯುವ ವ್ಯವಸ್ಥೆ ಇರುತ್ತದೆ. ಇದರಲ್ಲಿ ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಗಳ ಪ್ರತಿನಿಧಿಗಳು ತಮ್ಮ ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ತಂಡಗಳೊಂದಿಗೆ ಮತ್ತು ವಾದ್ಯಗೋಷ್ಠಿಯೊಂದಿಗೆ ಅಧಿಕೃತ ವೇಷ, ಲಾಂಛನಗಳ ಸಹಿತ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಅರೆಸೈನ್ಯ ಪಡೆಯ ವಿವಿಧ ವರ್ಗಗಳ ಸುಮಾರು ಹನ್ನೆರಡು ತಂಡಗಳು ಭಾಗವಹಿಸುತ್ತವೆ. ಈ ಕವಾಯತಿನ ವಿಶಿಷ್ಟ ಅಂಗವೆಂದರೆ ಗಡಿರಕ್ಷಣಾದಳದವರು ಒಂಟೆಗಳ ಮೇಲೆ ಕವಾಯತು ನಡೆಸುವುದು. ಭಾರತದ ಈ ಬಗೆಯ, ಒಂಟೆಗಳನ್ನು ಆರೋಹಿಸುವ ರಕ್ಷಣಾಪಡೆ ಪ್ರಪಂಚದಲ್ಲಿ ಮತ್ತಾವ ದೇಶದಲ್ಲಿಯೂ ಇಲ್ಲ. ಇವಲ್ಲದೆ ದೇಶದ ಎಲ್ಲ ಪ್ರದೇಶಗಳಿಂದ ಆಯ್ಕೆಮಾಡಿದ ಎನ್.ಸಿ.ಸಿ. ಕೆಡೆಟ್‌ಗಳು, ರಾಜಧಾನಿಯ (ದೆಹಲಿ) ವಿವಿಧ ಶಾಲೆಗಳ ಮಕ್ಕಳು ಈ ಉತ್ಸವದಲ್ಲಿರುತ್ತಾರೆ. ಪ್ರತಿಯೊಂದು ರಾಜ್ಯದ ಸಾಂಸ್ಕೃತಿಕ ಸಂಪತ್ತಿನ ಹಿರಿಮೆಯನ್ನು ಪ್ರದರ್ಶಿಸುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗುತ್ತ ನಮ್ಮ ದೇಶದ ವೈವಿಧ್ಯಮಯ ಸಂಸ್ಕೃತಿಯ ವೈಭವವನ್ನು ತೋರುತ್ತವೆ. ಸುಮಾರು ಸಾವಿರಕ್ಕೂ ಮೀರಿದ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಶಾಲಾ ಮಕ್ಕಳು ಚೈತನ್ಯದ ಚಿಲುಮೆಗಳಂತೆ ಮನಸೆಳೆಯುತ್ತಾರೆ. ಕವಾಯತು ನಡೆಸುವ ಕಾರ್ಯಕ್ರಮದ ಕೊನೆಗೆ ಮೈನವಿರೇಳಿಸುವ ಮೋಟರ್ ಸೈಕಲ್ ಸವಾರಿಯ ಸಾಹಸ ಮತ್ತು ಆಕರ್ಷಕವಾದ ವಿಮಾನ ಹಾರಾಟ ಹಾಗೂ ಹೆಲಿಕಾಪ್ಟರ್‌ಗಳಲ್ಲಿ ರಾಷ್ಟ್ರಧ್ವಜವನ್ನು ಹೊತ್ತು ಒಯ್ಯುವ ಮೂರೂ ರಕ್ಷಣಾ ಸೈನ್ಯದ ಸೇವೆ ಇದ್ದು, ಇಡೀ ಕವಾಯತಿನ ಕಾರ್ಯಕ್ರಮ ಅತ್ಯಾಕರ್ಷಕತೆಯೊಂದಿಗೆ ದೇಶ, ವಿದೇಶಗಳ ಜನರನ್ನು ಸಮ್ಮೋಹನಗೊಳಿಸುವಂತಿರುತ್ತದೆ.

ಕವಾಯತಿನಲ್ಲಿ ಸೈನಿಕ ವಂದನೆಯನ್ನು (21 ಬಾರಿ ಗಾಳಿಯಲ್ಲಿ ಗುಂಡು ಹಾರಿಸುವುದು) ನವದೆಹಲಿಯಲ್ಲಿ ರಾಷ್ಟ್ರಪತಿಗಳು ಸ್ವೀಕರಿಸಿದರೆ ರಾಜ್ಯ ರಾಜಧಾನಿಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಅಲ್ಲಿನ ರಾಜ್ಯಪಾಲರು ಸ್ವೀಕರಿಸುತ್ತಾರೆ.

ಪುಟ 4 ಕ್ಕೆ ➤

➢ ಪುಟ 3ರಿಂದ..... ಗಣರಾಜ್ಯೋತ್ಸವ

ಕವಾಯತು ಮಾಡುವ ಕಾರ್ಯಕ್ರಮಕ್ಕೆ ಮೊದಲಿಗೆ ಕೆಲವು ಪ್ರಮುಖ ಕಾರ್ಯಕ್ರಮಗಳು ನಡೆಯುತ್ತವೆ. ರಾಜಪಥ್ ಮತ್ತು ಇಂಡಿಯಾಗೇಟ್ ನಡುವೆ ಇರುವ 'ರೈಸೀನ ಹಿಲ್' ಎಂಬಲ್ಲಿ ರಾಷ್ಟ್ರಪತಿಗಳಿಂದ ಧ್ವಜಾರೋಹಣ ಕಾರ್ಯ ನಡೆಯುತ್ತದೆ. ಇಂಡಿಯಾಗೇಟ್‌ನಲ್ಲಿ ಪ್ರಧಾನಮಂತ್ರಿಗಳು ದೇಶಕ್ಕಾಗಿ ಹುತಾತ್ಮರಾದ ಅಸಂಖ್ಯಾತ ಸೈನಿಕರ ಬಲಿದಾನವನ್ನು ಸ್ಮರಿಸುವ 'ಅಮರಜ್ಯೋತಿ' ಕಾರ್ಯಕ್ರಮ ಎರಡು ನಿಮಿಷಗಳ ಮೌನಾಚರಣೆಯೊಂದಿಗೆ ನಡೆಸಿ ರಾಷ್ಟ್ರಪತಿಗಳೊಂದಿಗೆ ಸೇರುತ್ತಾರೆ. ಆ ಸಮಯದಲ್ಲಿ ವಿದೇಶದ ರಾಜ್ಯ ಅಥವಾ ದೇಶದ ಮುಖ್ಯಸ್ಥರು ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದು ರಾಷ್ಟ್ರಪತಿಗಳೊಂದಿಗೆ ಅಲ್ಲಿ ಉಪಸ್ಥಿತರಾಗಿರುತ್ತಾರೆ. ಈ ಬಾರಿಯ ಗಣರಾಜ್ಯೋತ್ಸವದ ವಿಶೇಷವೆಂದರೆ ಪ್ರಪ್ರಥಮ ಬಾರಿಗೆ ಜಗತ್ತಿನ ಮತ್ತೊಂದು ಪ್ರಬಲ ಪ್ರಜಾಪ್ರಭುತ್ವ ದೇಶವಾದ ಅಮೆರಿಕೆಯ ರಾಷ್ಟ್ರಾಧ್ಯಕ್ಷರಾದ ಬರಾಕ್ ಒಬಾಮರವರು ಮುಖ್ಯ ಅತಿಥಿಯಾಗಿ ಆಗಮಿಸುತ್ತಿರುವುದು.

ಅಶೋಕಚಕ್ರ, ಕೀರ್ತಿಚಕ್ರ ಮುಂತಾದ ಪ್ರಶಸ್ತಿಗಳನ್ನು, ಮೂರು ಸೇನಾ ಪಡೆಗಳಲ್ಲಿ ವಿವಿಧ ಸಂದರ್ಭಗಳಲ್ಲಿ ತೋರಿದ ವಿಶೇಷ ಸಾಹಸಕ್ಕಾಗಿ, ನಾಗರಿಕರು ಮಕ್ಕಳೂ ಸೇರಿದಂತೆ ಹಲವು ಅಪಾಯಕರ ಸನ್ನಿವೇಶಗಳಲ್ಲಿ ಪ್ರದರ್ಶಿಸಿದ ಧೈರ್ಯ, ಸಾಹಸಕ್ಕಾಗಿ ಗೌರವಿಸಿ ರಾಷ್ಟ್ರಪತಿ ಪದಕಗಳನ್ನು ನೀಡಲಾಗುತ್ತದೆ. ಮೊದಲ ಬಾರಿಗೆ ಗಣರಾಜ್ಯೋತ್ಸವ ನಡೆದಾಗ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಣೆ ಮಾಡಿದವರು ಡಾ|| ಬಾಬು ರಾಜೇಂದ್ರಪ್ರಸಾದ್. ಅಂದು ಅವರ ಮಾಡಿದ ಭಾಷಣದಲ್ಲಿ ಹೀಗೆಂದು ಹೇಳಿದ್ದರು. 'ಇದು ಸಂತೋಷದಿಂದ ಸಂಭ್ರಮಿಸುವ ದಿನವಷ್ಟೇ ಆಗಿಲ್ಲ. ದೇಶದ ರಕ್ಷಣೆಗಾಗಿ ನಾವು ಕೂಡ ಎಂತಹ ತ್ಯಾಗಕ್ಕೂ ಸಿದ್ಧರಾಗಿರುತ್ತೇವೆಂದು ಸಂಕಲ್ಪ ಮಾಡುವ ದಿನ. ನಮ್ಮ ದೇಶದಲ್ಲಿ ಕೃಷಿಕರನ್ನು, ಕಾರ್ಮಿಕರನ್ನು, ಶ್ರಮಿಕರನ್ನು ಚಿಂತಕರನ್ನು ರೂಪಿಸುವ ಮಹತ್ತರವಾದ ಕಾರ್ಯದಲ್ಲಿ ಕೈಜೋಡಿಸುವ ಶಪಥವನ್ನು ಮಾಡುವ ದಿನ. ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರ ಕನಸಿನ ಭಾರತದ ನಿರ್ಮಾಣಕ್ಕಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವ ದಿನ'.

ದೇಶದೆಲ್ಲೆಡೆ ಈ ಮಹತ್ತ್ವದ ದಿನಾಚರಣೆಯ ಹಿನ್ನೆಲೆಯನ್ನು ಅರಿತು ಪಾಲ್ಗೊಳ್ಳುವುದು ಅಗತ್ಯ. ಅದರಲ್ಲಿಯೂ ಶಿಕ್ಷಣ ಸಂಸ್ಥೆಗಳಲ್ಲಿ ಮುಂದಿನ ಪ್ರಜೆಗಳಾದ ವಿದ್ಯಾರ್ಥಿಗಳಿಗೆ ಇವೆಲ್ಲದರ ಅರಿವು ನೀಡಿ ರಾಷ್ಟ್ರೀಯತೆಯ ಭಾವನೆಯನ್ನು ಮೂಡಿಸುವುದು ಅವಶ್ಯ. ಕೇವಲ ಒಂದು ಧ್ವಜಾರೋಹಣ, ಒಂದಷ್ಟು ಕವಾಯತು, ಕೆಲವು ಗೀತೆ, ನೃತ್ಯಗಳು, ನೀರಸವಾದ ಭಾಷಣ, ಒಂದಷ್ಟು ಸಿಹಿ ಹಂಚಿಕೆ ಇಷ್ಟರಲ್ಲೇ "ಗಣರಾಜ್ಯ ದಿನಾಚರಣೆ" ಮುಗಿದು ಹೋದರೆ ಮುಂದಿನ ಜನಾಂಗ ದೇಶದ ಬಗ್ಗೆ ಎಂತಹ ಕಾಳಜಿವಹಿಸಲು ಸಾಧ್ಯವಾದೀತು? ●



# ಸಂಕ್ರಾಂತಿ

ಭಾರತೀಯ ಕಾಲಮಾನ ಪದ್ಧತಿಯಂತೆ ವರ್ಷದಲ್ಲಿ 12 ತಿಂಗಳು 12 ರಾಶಿಗಳು ಇರುತ್ತದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಯನ್ನು ಪ್ರವೇಶಿಸುವ ಸಂಧಿಕಾಲಕ್ಕೆ ಸಂಕ್ರಾಂತಿ ಅಥವಾ ಸಂಕ್ರಮಣ ಎಂದು ಹೆಸರು. ಸೌರಮಾನದ ಪ್ರಕಾರ ಸೂರ್ಯನು ಮೇಷಾದಿ 12 ರಾಶಿಗಳನ್ನು ಪ್ರವೇಶಿಸುವಾಗಲೂ ಸಂಕ್ರಾಂತಿ ಬರುತ್ತದೆ. ಆದರೆ ಅವುಗಳಲ್ಲಿ ಕರ್ಕಾಟಕ ಸಂಕ್ರಾಂತಿ ಹಾಗೂ ಮಕರಸಂಕ್ರಾಂತಿಗಳು ಆಚರಣೆಯಲ್ಲಿದೆ. ಮಕರಸಂಕ್ರಾಂತಿಯಂದು ಸೂರ್ಯನು ಧನುರ್‌ರಾಶಿಯಿಂದ ಮಕರ ರಾಶಿಯನ್ನು ಪ್ರವೇಶಿಸುತ್ತಾನೆ. ಇದಕ್ಕಾಗಿಯೇ ಇದನ್ನು ಮಕರಸಂಕ್ರಾಂತಿ ಎಂದು ಕರೆಯುವುದು.

ಮಕರ ಸಂಕ್ರಾಂತಿಯಂದು ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸಂಚರಿಸಲು ಆರಂಭಿಸುತ್ತಾನೆ. ಆದ್ದರಿಂದಲೇ ಈ ದಿನವನ್ನು ಉತ್ತರಾಯಣ ಪುಣ್ಯಕಾಲ ಎಂದು ಪರಿಗಣಿಸುವುದು. ಮಕರ ಸಂಕ್ರಾಂತಿ ಸಾಮಾನ್ಯವಾಗಿ ಪುಷ್ಯಮಾಸದಲ್ಲೇ ಬರುತ್ತದೆ. ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾಂತಿಯವರೆಗೂ ದಿನದ ಅವಧಿ ಹೆಚ್ಚುತ್ತಾ ಹೋಗುತ್ತದೆ.

ಕರ್ಕಾಟಕ ಸಂಕ್ರಾಂತಿಯಂದು ಸೂರ್ಯ ದಕ್ಷಿಣಾಭಿಮುಖವಾಗಿ ಪ್ರಯಾಣ ಆರಂಭಿಸುತ್ತಾನೆ. ಅಂದಿನಿಂದ ಮಕರ ಸಂಕ್ರಾಂತಿಯವರೆಗೂ ದಿನದ ಅವಧಿ ಕ್ಷೀಣಿಸುತ್ತಾ ಹೋಗುತ್ತದೆ.

ಮಕರ ಸಂಕ್ರಾಂತಿ ಭಾರತದಲ್ಲಿ ಪ್ರಮುಖ ಹಬ್ಬ. ಇದನ್ನು ಸಾಮಾನ್ಯವಾಗಿ ದೇಶದ ಎಲ್ಲ ಜನರು ಆಚರಿಸುತ್ತಾರೆ. ಜನವರಿ 14 ಮಕರ ಸಂಕ್ರಾಂತಿಯ ದಿನ. 3 ವರ್ಷಕ್ಕೊಮ್ಮೆ ಸಂಕ್ರಾಂತಿಯ ಆಚರಣೆ ಜನವರಿ 15 ರಂದು ಇರುತ್ತದೆ. ಈ ದಿನ ಎಳ್ಳು ಬೆಲ್ಲವನ್ನು ಹಂಚುವುದರ ಮೂಲಕ ಭಾರತೀಯರು ಬಂಧು ಮಿತ್ರರ ಸಹ ಮಿಲನವನ್ನು ಮಾಡುತ್ತಾರೆ. ಇದು ಸುಗ್ಗಿಯ ನಂತರ ಬರುವುದರಿಂದ ಮಕರಸಂಕ್ರಾಂತಿಯನ್ನು ಸುಗ್ಗಿಯ ಹಬ್ಬವೆಂದು, ಉತ್ತಮ ಬೆಳೆಗಳಿಗೆ ಕಾರಣವಾದ ದನ ಕರುಗಳನ್ನು ಪೂಜಿಸುವುದೂ ವಾಡಿಕೆಯಲ್ಲಿದೆ.

ಉತ್ತರಾಯಣ ಹಾಗೂ ದಕ್ಷಿಣಾಯನದ ಪ್ರಾರಂಭ ದಿನಗಳು ವಿಶೇಷ ಮಹತ್ವವುಳ್ಳದ್ದಾಗಿದೆ. ಮಹಾಭಾರತದ ಭೀಷ್ಮಾಚಾರ್ಯರು ಇಚ್ಛಾಮರಣಿಯಾಗಿದ್ದು, ಆತ್ಮತ್ಯಾಗ ಮಾಡಲು ಉತ್ತರಾಯಣ ಪುಣ್ಯಕಾಲವನ್ನೇ ನಿರೀಕ್ಷಿಸುತ್ತಿದ್ದರು. ರಾಮಾಯಣ ಕಾಲದ ಶ್ರೀ ರಾಮನು ರಾವಣನನ್ನು ಸಂಹರಿಸಿ ಸೀತೆಯನ್ನು ಕರೆತಂದ ದಿನವೆಂದು ಜನ ನಂಬಿದ್ದಾರೆ.

– ಸಂಗ್ರಹ

# ಗಣಿತ ಬೋಧನೆಯಲ್ಲಿ ಮೌಲ್ಯಗಳ ಅಳವಡಿಕೆ



**ವಿಜಯಲಕ್ಷ್ಮಿ ಬಿ.**
**ಸಹ ಶಿಕ್ಷಕರು, ಕನಕಪುರ ಪ್ರೌಢಶಾಲೆ**

ಗಣಿತ, ಭೂಮಂಡಲದ ಉಗಮದೊಂದಿಗೇ ಪ್ರಾರಂಭವಾಗಿದೆ. ಜೀವಿಗಳ ಹುಟ್ಟು ಸಹ ಒಂದು ಗಣಿತವೇ. ಒಂದು ಅಂಡ+ ಒಂದು ಜೀವಾಣು ಇವುಗಳ ಸಮ್ಮಿಲನದಿಂದ ಒಂದು ಜೀವ. ಹೀಗೆ ನಂತರದಲ್ಲಿ ಅನೇಕ ಜೀವಿಗಳು ಸರಳವಾದ ಗುಣಾಕಾರ ಕ್ರಮದಿಂದ ಬೆಳೆಯಲು ಪ್ರಾರಂಭಿಸಿದುವು.

ಗಣಿತವು ಭೂಮಿಯ ಮೇಲೆ ಮಾನವನ ಪ್ರವೇಶವಾದ ಮೇಲೆ ಅವನ ನರನಾಡಿಗಳಲ್ಲಿ ಪ್ರವೇಶಿಸಿತು. ಅವನ ಜೀವನಕ್ಕೆ ನಿತ್ಯವೂ ಬೇಕಾದ ಆಹಾರವನ್ನು ಪಡೆಯಲು ಚೂಪಾದ ಆಯುಧಗಳಿಂದ ಪ್ರಾಣಿಗಳನ್ನು ಬೇಟೆಯಾಡಲು, ಮನೆ ಕಟ್ಟಿಕೊಳ್ಳಲು ಹೀಗೆ ಪ್ರತಿಯೊಂದಕ್ಕೂ ರೇಖಾಗಣಿತದ ಉಪಯೋಗವಾಗಿರುವುದನ್ನು ನಾವು ಕಾಣಬಹುದು.

'ಶಿಕ್ಷಣ ಎಂಬುದು ಒಂದು ಒರಟಾದ ಕಲ್ಲಿನಿಂದ ಸುಂದರ ಮೂರ್ತಿಯನ್ನು ಕೆತ್ತನೆಯ ಮೂಲಕ ಮಾಡುವಂತೆ' ವಿದ್ಯಾರ್ಥಿಗಳನ್ನು ತಿದ್ದಿ, ತೀಡಿ ಸತ್ಪ್ರಜೆಯನ್ನಾಗಿ ಮಾಡುವ ಸಾಧನ. ಮೌಲ್ಯಗಳ ಬೋಧನೆಯಿಂದ ಶಿಕ್ಷಣದ ಮೂಲಕ ಈ ಕಾರ್ಯ ನಡೆಯುವಂತಹುದು. 'ಯಾವ ಬಗೆಯ ಶಿಕ್ಷಣದಿಂದ ಶೀಲರೂಪಗೊಳ್ಳುವುದೋ, ಮನಃಶಕ್ತಿ ವೃದ್ಧಿಯಾಗುವುದೋ, ಬುದ್ಧಿ ವಿಕಾಸಗೊಳ್ಳುವುದೋ ಮತ್ತು ಯಾವುದರಿಂದ ನಾವು ನಮ್ಮ ಕಾಲ ಮೇಲೆ ನಿಲ್ಲುವ ಸ್ವಾವಲಂಬಿಗಳಾಗಬಲ್ಲೆವೋ ಅಂತಹ ಶಿಕ್ಷಣ ನಮಗೆ ಅವಶ್ಯಕ' ಎಂಬ ವಿವೇಕಾನಂದರ ವಾಣಿಯಂತೆ ಅಂತಹ ತಿಳುವಳಿಕೆ ನೀಡುವಲ್ಲಿ ಗಣಿತ ಪ್ರಧಾನವಾಗಿದೆ.

ಗಣಿತವು ವಿದ್ಯಾರ್ಥಿಗಳ ಆಲೋಚನಾಶಕ್ತಿ, ವಿವೇಚನಾಶಕ್ತಿ, ತಾರ್ಕಿಕ ಶಕ್ತಿ ಮತ್ತು ಸಂಶೋಧನಾ ಸಾಮರ್ಥ್ಯ ಹಾಗೂ ಶಿಸ್ತಿನ ನಡವಳಿಕೆಯನ್ನು ಕಲಿಸುತ್ತದೆ. ಗಣಿತವನ್ನು ಕಲಿಯುವುದರಿಂದ ನಮ್ಮ ಜೀವನ ಹಸನುಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಗಣಿತದ ನಾಲ್ಕು ಮುಖ್ಯ ಕ್ರಿಯೆಗಳಾದ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರಗಳಲ್ಲಿ ನಮ್ಮ ಜೀವನದ ಬಹುಮುಖ್ಯ ಅಂಶಗಳು ಸೇರಿಕೊಂಡಿವೆ. 2+3=5 ಈ ಸಂಖ್ಯೆಗಳನ್ನು ಪ್ರಪಂಚದ ಯಾವುದೇ ಮೂಲೆಯಲ್ಲಿ ಕೂಡಿದರೂ ಅದು ಬದಲಾಗುವುದಿಲ್ಲ. ಹಾಗೆಯೇ ಯಾರೇ ಸಿಗಲಿ, ಯಾವ ಮತದವರೇ ಆಗಲಿ, ಇಡೀ ಮನುಕುಲದಲ್ಲಿ ಎಲ್ಲರೂ ಸಮಾನರು ಎಂಬ ತತ್ತ್ವವನ್ನು ಇದು ಸಾರುತ್ತದೆ. ಧನಾತ್ಮಕ ಸಂಖ್ಯೆಗಳನ್ನು ಕೂಡುವುದರಿಂದ ಅದರ ಬೆಲೆ ಹೇಗೆ ಹೆಚ್ಚುತ್ತದೋ ಹಾಗೆ ಮನುಷ್ಯನ ಧನಾತ್ಮಕ ಚಿಂತನೆಗಳಿಂದ ಜೀವನವನ್ನು ಸದೃಢವಾಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ಲೆಕ್ಕವನ್ನು ಸರಿಯಾಗಿ ನಿಖರವಾಗಿ ಬಿಡಿಸಿದಲ್ಲಿ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ. ಎರಡು ಸಂಖ್ಯೆಗಳನ್ನು ಗುಣಿಸುವುದರಿಂದ ಅದರ ಬೆಲೆ ಹೆಚ್ಚಾಗುವಂತೆ ಸಾಮರಸ್ಯ ಮನೋಭಾವದಿಂದ ನಮ್ಮ ಸ್ನೇಹಲೋಕವನ್ನು ಸೃಷ್ಟಿಸಿಕೊಳ್ಳಬಹುದು. ಸುಖ ಸಂತೋಷವನ್ನು ಗುಣಿಸುವುದರಿಂದ ಸುಖ ಸಂತೋಷಗಳು ವೃದ್ಧಿಸುತ್ತವೆ. ಹಾಗೇಯೇ ಒಂದು ದೊಡ್ಡ ಸಂಖ್ಯೆಯನ್ನು ಭಾಗಾಕಾರ ಮಾಡಿದಾಗ ಅದು ಸಣ್ಣದಾಗುವಂತೆ ನಮ್ಮ ದುಃಖದುಮ್ಮಾನಗಳನ್ನು ಭಾಗಿಸಿದಾಗ ಹಲವರಲ್ಲಿ ಹಂಚಿಕೊಂಡು ನಮ್ಮ ಚಿಂತೆಯೂ ಕಡಿಮೆಯಾಗುವುದೂ ಗಣಿತದ ಸ್ವಾರಸ್ಯ. ಗಣಿತ ಬೋಧನೆಯಿಂದ ವಿದ್ಯಾರ್ಥಿಗಳಲ್ಲಿ ಸತ್ಯದ ಅರಿವು ಮೂಡುತ್ತದೆ. ಸತ್ಯಪಾಲನೆಗಾಗಿ ಶ್ರಮಿಸುವಂತೆ ಮಾಡುತ್ತದೆ. ಅಂತೆಯೇ ಅವರಲ್ಲಿ ನೈತಿಕತೆ ಬೆಳೆಯುತ್ತದೆ. ಅದರೊಂದಿಗೆ ಅಂದರೆ ಪ್ರಾಮಾಣಿಕತೆಯ ಅವಿಭಾಜ್ಯ ಅಂಗಗಳಾದ ಸಹಕಾರ, ಪ್ರೀತಿ, ಸೌಹಾರ್ದ, ಅಂತಃಕರಣಗಳನ್ನು ಬೆಳೆಸುತ್ತ, ಅಜ್ಞಾನದ ಅಂಧಕಾರವನ್ನು ತೊಡೆದು, ಸ್ವಾರ್ಥ, ಅಹಂಕಾರಗಳನ್ನು ದೂರಮಾಡಿ ಸಂಘ ಜೀವಿಗಳಾಗಿ ಬಾಳುವಂತೆ ಮಾಡುತ್ತದೆ. ಹಿಂದಿನ ಕಾಲದಲ್ಲಿ ಮನೆಯಲ್ಲಿನ ಹಿರಿಯರು ಮಕ್ಕಳಿಗೆ ಬಾಯಿಲೆಕ್ಕದ ಆಟಗಳನ್ನು ಆಡಿಸುತ್ತ ಮನರಂಜನೆಯನ್ನು ಎಲ್ಲರೂ ಪಡೆಯುತ್ತಿದ್ದರು. ಗಣಿತದ ಮೂಲಕ ಮಕ್ಕಳಲ್ಲಿ ಉಳಿತಾಯ ಮನೋಭಾವನೆಯನ್ನು ತರಲು ಸಾಧ್ಯ. ಮುಂದೆ ಅವರ ಭವಿಷ್ಯದ ದಿನಗಳನ್ನು ಸಮರ್ಥವಾಗಿ ಎದುರಿಸಲು ಸಿದ್ಧರಾಗುವರು. ದೇಶದ ಆರ್ಥಿಕ ಪರಿಸ್ಥಿತಿಯ ಅರಿವನ್ನು ಪಡೆದು ಅದರ ಸುಭದ್ರತೆಗೆ ಪ್ರಜೆಗಳಾಗಿ ತಮ್ಮ ಕರ್ತವ್ಯವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು.

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು, ಇದನ್ನು ಸುಂದರವಾಗಿಸಬೇಕಾದರೆ ಅವರಲ್ಲಿ ಪರಸ್ಪರ ಸೌಹಾರ್ದ ಭಾವನೆ ಬೆಳೆಸುವುದು ಅಗತ್ಯ. ನಾವು ಮಕ್ಕಳು ಎಷ್ಟೋ ಸಂದರ್ಭಗಳಲ್ಲಿ ಲೆಕ್ಕವನ್ನು ಕಲೆತು ಬಿಡಿಸುವುದನ್ನು ಕಾಣುತ್ತೇವೆ. ಒಂದು ಕಡ್ಡಿಯನ್ನು ಹೇಗೆ ಸುಲಭವಾಗಿ ಮುರಿಯಬಹುದೋ ಅಷ್ಟೇ ಸುಲಭವಾಗಿ 10 ಕಡ್ಡಿಗಳ ಕಟ್ಟನ್ನು ಮುರಿಯಲಾಗದು. ಹಾಗೇ ಒಗ್ಗಟ್ಟಿನಲ್ಲಿ ಬಲವಿದೆ ಎಂದು ಈ ಸಂದರ್ಭದಲ್ಲಿ ಮಕ್ಕಳಿಗೆ ತಿಳಿಸಬಹುದು. ನಿಖರತೆ, ಸರಳತೆ, ಗಣಿತದ ಸ್ವರೂಪವಾಗಿರುವಂತೆ ಬದುಕು ಕೂಡ ಗುಣಗಳಿಂದ ಸುಂದರವಾಗುತ್ತದೆಂಬ ಸತ್ಯ ದರ್ಶನ ಇಲ್ಲಿ ಸಾಧ್ಯವಾಗುತ್ತದೆ. ●

## ಸಂಘದ ವಾರ್ತೆ

# ಶೈಕ್ಷಣಿಕ ಕಾರ್ಯಾಗಾರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲಾಘಟಕವು ದಿ. 17–12–14 ರಂದು ಪ್ರೌಢಶಾಲಾ ಶಿಕ್ಷಕರಿಗಾಗಿ ಮುಂಬರುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮ ಪಡಿಸುವ ವಿಷಯವನ್ನು ಕುರಿತು ಒಂದು ದಿನದ ಕಾರ್ಯಾಗಾರವನ್ನು, ಕಮಲಾಬಾಯಿ ಬಾಲಕಿಯರ ಪ್ರೌಢಶಾಲೆಯಲ್ಲಿ ಏರ್ಪಡಿಸಿತ್ತು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಎಂ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಹೆಚ್.ಎಸ್. ಗಣೇಶ ಭಟ್ ರವರು ಫಲಿತಾಂಶ ಉತ್ತಮ ಪಡಿಸಲು ಕೆಲವು ಮಾರ್ಗಸೂಚಿಗಳನ್ನು ಸೂಚಿಸಿದರು. ಅವುಗಳಲ್ಲಿ ಪ್ರಮುಖವಾದುವು,

1. ವಿದ್ಯಾರ್ಥಿಗಳಲ್ಲಿನ ಕ್ಲಿಷ್ಟ ಸಮಸ್ಯೆಗಳನ್ನು ಕುರಿತು ಅವರೊಡನೆ ಚರ್ಚಿಸಿ. ; 2. ಸಮಸ್ಯೆಗಳ ಪರಿಹಾರ ರೂಪಿಸಿ ; 3. ವಿದ್ಯಾರ್ಥಿಗಳು ಗುಂಪು ಚರ್ಚೆಯಲ್ಲಿ ಸಮಸ್ಯೆ ಹಾಗೂ ಪರಿಹಾರವನ್ನು ನಿಮ್ಮ ಇರುವಿಕೆಯಲ್ಲಿ ಮಾಡುವಂತೆ ಪ್ರೋತ್ಸಾಹಿಸಿ, ಸೂಕ್ತ ಮಾರ್ಗದರ್ಶನ ಮಾಡಿ ; 4. ವಿದ್ಯಾರ್ಥಿಗಳ ಕಲಿಕಾಶಕ್ತಿಗೆ ತಕ್ಕಂತೆ ಪ್ರಶ್ನೆಗಳನ್ನು ಅವರ ಶಕ್ತಿಗನುಗುಣವಾಗಿ ಅಳವಡಿಸಿ ; 5. ಸುಲಭ ಪ್ರಶ್ನೆಗಳಿಗೆ ಮೊದಲು ಸಿದ್ಧಪಡಿಸಿ, ನಂತರ ಕ್ಲಿಷ್ಟ, ಕ್ಲಿಷ್ಟಕರ ಪ್ರಶ್ನೆಗಳತ್ತ ಗಮನ ಹರಿಸಿ ; 6. ಶಾಲೆಯಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿ ; 7. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಪ್ರೋತ್ಸಾಹಿಸಿ, ನಾನೂ ಮಾಡಬಲ್ಲೆನೆಂಬ ವಿಶ್ವಾಸ ಬೆಳೆಸಿ; 8. ಪೋಷಕರ ಸಹಕಾರವನ್ನು ಸಾಧ್ಯವಿದ್ದೆಡೆ ಉಪಯೋಗಿಸಿ.

ಭೋಜನಾನಂತರ ಅವಧಿಯಲ್ಲಿ ಸಂಘದ ಪೋಷಕರಾದ ಶ್ರೀ ಹೆಚ್. ನಾಗಭೂಷಣ್‌ರವರು ಮಾತನಾಡಿ. ವಿದ್ಯಾರ್ಥಿಗಳಲ್ಲಿ ಜೀವನ ಮೌಲ್ಯಗಳನ್ನು ಕಲಿಸುವ ಬಗ್ಗೆ ಸೂಕ್ತ ಉದಾಹರಣೆ ಸಹಿತ ವಿವರಿಸಿದರು.

ಸತ್ಯನಿಷ್ಠೆ, ಪ್ರೇಮ ಪ್ರಾಮಾಣಿಕತೆ, ಪರಿಸರ ರಕ್ಷಣೆ, ಅಪರಿಗ್ರಹ, ತ್ಯಾಗಮನೋಭಾವ, ಶ್ರಮನಿಷ್ಠೆ ಮುಂತಾದ ಹಲವು ಗುಣಗಳ ಮೊತ್ತಕ್ಕೆ ನಾವು ಶಾಶ್ವತ ಜೀವನಮೌಲ್ಯಗಳೆನ್ನುತ್ತೇವೆ. ಇದು ಕಾಲಾತೀತ, ದೇಶಾತೀತ. ಅಂದರೆ ಎಲ್ಲ ಕಾಲಕ್ಕೂ ಸಲ್ಲುವ, ಎಲ್ಲ ದೇಶಗಳಲ್ಲೂ ಸಲ್ಲುವ ಮೌಲ್ಯಗಳು. ಆದರೆ ಇಂದು ಜೀವನ ಮೌಲ್ಯ, ನೈತಿಕ ಮೌಲ್ಯ ಎಂದಾಕ್ಷಣ ಇದು ಯಾವುದೇ ಒಂದು ಧರ್ಮಕ್ಕೆ ಸಂಬಂಧಿಸಿದ್ದು ಎಂಬ ವಿಕೃತ ಕಲ್ಪನೆ ಸಮಾಜದಲ್ಲಿದೆ. ಇದಕ್ಕೆ ಕಾರಣ 'ಧರ್ಮ' ಶಬ್ಧದ ಅರ್ಥವನ್ನು ತಿಳಿಯದಿರುವುದು. 'ಧರ್ಮವೆಂದರೆ ಜೀವನವನ್ನು ನಡೆಸುವ ರೀತಿ'. ಎಲ್ಲ ಮತ ಪಂಥಗಳಿಗೂ ಈ ಜೀವನ ಮೌಲ್ಯಗಳ ಅಗತ್ಯ ಇದ್ದೇ ಇದೆ. ಇದನ್ನು ಮಕ್ಕಳಲ್ಲಿ ಬೆಳೆಸುವ ಕೆಲಸ ಶಿಕ್ಷಕರಾದ ನಮ್ಮಿಂದ ಆಗಬೇಕು. ಆಗ ಮಾತ್ರ, ಸುಂದರ ಸಮಾಜದ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ನಂತರ ನಡೆದ ಸಂವಾದದಲ್ಲಿ ಅನೇಕ ಶಿಕ್ಷಕರು ಪ್ರಶ್ನೆಗಳನ್ನು ಕೇಳಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಂಡರು.

ಅನಂತರ ಮಾತನಾಡಿದ ಮಹಿಳಾ ವಿಭಾಗದ ಪ್ರಮುಖರಾದ ಆರ್. ಸೀತಾಲಕ್ಷ್ಮಿಯವರು ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕಿಯರೇ ಅಧಿಕವಾಗಿದ್ದರೂ ಸಂಘಟನೆಯಲ್ಲಿ ಅವರ ಪಾತ್ರ ಕಡಿಮೆ. ಅನೇಕ ಶಿಕ್ಷಣ ಆಯೋಗಗಳು, ತಜ್ಞರ ಅಭಿಪ್ರಾಯದಂತೆ ಈ ಕ್ಷೇತ್ರದಲ್ಲಿ ಶಿಕ್ಷಕಿಯರ ಪಾತ್ರ ಪ್ರಮುಖ. ಆದ್ದರಿಂದ ಹೆಚ್ಚು ಹೆಚ್ಚು ಶಿಕ್ಷಕಿಯರು ಸಂಘದ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಕೋರಿ, ಶಿಕ್ಷಕಿಯರು ಸಂಘಟನೆಯ ಶಕ್ತಿಯನ್ನು ಬಲಪಡಿಸಲು ಸಂಘದ ಸದಸ್ಯರಾಗುವಂತೆ ಕರೆಕೊಟ್ಟರು.

ಶಾಲೆಯ ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯ ಮೂಲಕ ಕಾರ್ಯಕ್ರಮ ಆರಂಭವಾಯಿತು. ಕಾರ್ಯದರ್ಶಿಗಳಾದ ಶ್ರೀ ಎಸ್.ಜಿ.ತಾಂಬೆಯವರು ಸ್ವಾಗತಿಸಿದರು. ಕಾರ್ಯಾಧ್ಯಕ್ಷರಾದ ಶ್ರೀ ಜೆ.ಎಂ.ಜೋಶಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಾಲಯ ಪ್ರಮುಖ ಶ್ರೀ ಜಿ.ಎಸ್.ಕೃಷ್ಣಮೂರ್ತಿಯವರು ಸಂಘದ ಬೆಳವಣಿಗೆ, ಧ್ಯೇಯೋದ್ದೇಶಗಳನ್ನು ಪರಿಚಯಿಸಿದರು.

ನಂತರ ಕಮಲಾ ಬಾಯಿ ಶಾಲೆಯ ಮುಖ್ಯಶಿಕ್ಷಕಿ ಶ್ರೀಮತಿ ಶಾರದಾರವರು ಮಾತನಾಡಿ ತಮ್ಮ ಶಾಲೆಯ ಧ್ಯೇಯ ಹಾಗೂ ಶಾಲಾಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಕೊನೆಯಲ್ಲಿ ಜಿಲ್ಲಾಧ್ಯಕ್ಷರಾದ ಡಾ. ಸೂಗೂರು ತಿಪ್ಪೇಸ್ವಾಮಿ ಯವರು ಈ ಕಾರ್ಯಕ್ರಮದ ಯಶಸ್ಸಿಗೆ ಪಾತ್ರರಾದ ಎಲ್ಲರನ್ನೂ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಬೇರೆ ಬೇರೆ ಶಾಲೆಗಳಿಂದ 405 ಶಿಕ್ಷಕ, ಶಿಕ್ಷಕಿಯರು ಪಾಲ್ಗೊಂಡರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಪಾಕಿಸ್ಥಾನದ ಪೇಶಾವರದಲ್ಲಿ ವಿದ್ಯಾರ್ಥಿಗಳ ಹತ್ಯೆಯನ್ನು ಖಂಡಿಸಿ ಮತ್ತು ಹತ್ಯೆಗೀಡಾದ ಮಕ್ಕಳ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಲಾಯಿತು.

**ವರದಿ : ಎಸ್. ಜಿ. ತಾಂಬೆ**

**ಪುಟ 7 ಕ್ಕೆ ➢**

➤ ಪುಟ 6 ರಿಂದ.....

ಸಂಘದ ವಾರ್ತೆ

ಕಾರ್ಯಕರ್ತರಿಗೂ ಅನ್ವಯಿಸುತ್ತದೆ. ಎಂದು ಹೇಳಿದರು. ತಮ್ಮ ಮಾತನ್ನು ಮುಂದುವರೆಸಿದ ಶ್ರೀ ನಾಗಭೂಷಣರಾವ್ ಮಾಧ್ಯಮಿಕ ಶಿಕ್ಷಕ ಸಂಘ 49 ವರ್ಷಗಳ ಹಿಂದೆ ಪ್ರಾರಂಭಗೊಂಡು ರಾಷ್ಟ್ರೀಯಮಟ್ಟದಲ್ಲಿ ಮೊದಲಿಗೆ AISTF ನೊಂದಿಗೆ ಸಂಲಗ್ನ ಹೊಂದಿತ್ತು. ಕಳೆದ 25 ವರ್ಷಗಳಿಂದ ABRSM ನೊಂದಿಗೆ ಒಗ್ಗೂಡಿ ಕೆಲಸ ಮಾಡಿದ ಖ್ಯಾತಿಯನ್ನು ನೆನಪಿಸಿದರು.

ಶಿಕ್ಷಕರು ಪಾತ್ರತೆ ಸಂಪಾದಿಸುವಂತಾಗಬೇಕು. ಇದರ ಪ್ರಯತ್ನ ಮಾಧ್ಯಮಿಕ ಶಿಕ್ಷಕ ಸಂಘದಿಂದ ಸಾಧ್ಯವೆಂದು ತಿಳಿಸಿದರು. ವೃತ್ತಿ ನೈಪುಣ್ಯತೆ ಬೆಳೆಸುವುದು, ಅನ್ಯಾಯದ ವಿರುದ್ಧ ಪ್ರತಿಭಟಿಸುವುದು, ಧರ್ಮದ ಸ್ಥಾಪನೆ ಶಿಕ್ಷಕ ಸಂಘದ ಗುರಿ ಎಂದು ಪ್ರತಿಪಾದಿಸಿದರು. ಶಿಕ್ಷಕ ಸಂಘದಲ್ಲಿ ಕಾರ್ಯಕರ್ತರು ರಚನಾತ್ಮಕವಾಗಿ ಹಾಗೂ ಆಂದೋಳನಾತ್ಮಕ ವಾಗಿ ಕೆಲಸ ಮಾಡುವಂತೆ ಹಾಗೂ ಪಕ್ಷಾತೀತವಾಗಿರುವಂತೆ ಕರೆ ನೀಡಿದರು.

ಶಿಕ್ಷಕ ಸಮಾಚಾರದ ಸಂಪಾದಕರಾದ ಶ್ರೀ ಎನ್. ನಾಗರಾಜರವರು ಶಿಕ್ಷಕ ಸಮಾಚಾರ ಪತ್ರಿಕೆ ಹಾಗೂ ಅದರ ಮಹತ್ವವನ್ನು ವಿವರಿಸಿ ಎಲ್ಲರೂ ಶಿಕ್ಷಕ ಸಮಾಚಾರದ ಚಂದಾದಾರಾಗುವಂತೆ ಕೋರಿದರು.

ಎರಡನೇ ಅವಧಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಶಿವಾನಂದರವರು ಸಂಘ ಕಳೆದ ನಾಲ್ಕುವರೆ ದಶಕಗಳಿಂದ ಮಾಡಿದ ಕಾರ್ಯಸಾಧನೆಗಳನ್ನು ತಿಳಿಸಿದರು. ಸಂಘ ಶಿಕ್ಷಕರ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರ ಕಂಡುಕೊಂಡ ಬಗೆಯನ್ನು ವಿವರಿಸಿದರು. ಶಿಕ್ಷಕ ಸಂಘ ಏರ್ಪಡಿಸಿದ್ದ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿವರಿಸಿದರು. ಈ ಮೂಲಕ ಶಿಕ್ಷಕ ಸಂಘ ಇಲಾಖಾ ಅಧಿಕಾರಿಗಳೊಡನೆ ಉತ್ತಮ ಸಂಬಂಧ ಏರ್ಪಡಿಸಿಕೊಳ್ಳಲು ಸಾಧ್ಯವಾಯಿತು. ಹಾಗಾಗಿ ಅನೇಕ ಶಿಕ್ಷಕ ಸಮಸ್ಯೆಗಳು ಪರಿಹಾರವಾಗಲು ಸಹಾಯವಾಯಿತು ಎಂದರು

ಸಂಘವು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಗುಣಾತ್ಮಕ ಶಿಕ್ಷಕ ನೀಡುವ ಕಾರ್ಯಕ್ರಮಗಳ ಜೊತೆಗೆ ರಾಷ್ಟ್ರೀಯ ದೃಷ್ಟಿಯನ್ನು ರೂಪಿಸುವಂತೆ ಮನವಿ ಮಾಡಿದರು.

ಕಾರ್ಯಾಲಯದ ಪ್ರಮುಖನಾದ ಶ್ರೀ ಜಿ.ಎಸ್. ಕೃಷ್ಣಮೂರ್ತಿಯವರು ಶಿಕ್ಷಕರು ತಮ್ಮ ಸಾಮಾಜಿಕ ಜವಾಬ್ದಾರಿ ಯನ್ನು ಅರಿತು ವಿದ್ಯಾರ್ಥಿಗಳನ್ನು ಸಮಾಜಮುಖಿಯನ್ನಾಗಿ ಮಾಡುವಂತೆ ಆಗ್ರಹಿಸಿದರು.

ವಿಭಾಗೀಯ ಕಾರ್ಯದರ್ಶಿಗಳಾದ ವರದರಾಜುರವರು, ರಾಜ್ಯ ಸಂಘದ ಸಹಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲರು, ಗಂಗಾಧರ್, ಸಿದ್ದಲಿಂಗಸ್ವಾಮಿ ಮತ್ತು ಜಿಲ್ಲಾ ಕಾರ್ಯಕರ್ತರು ಹಾಜರಿದ್ದರು. ಜಿಲ್ಲಾಧ್ಯಕ್ಷರಾದ ಸಿ.ವಿ ಜಯ್ಯಣ್ಣ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಪಾಧ್ಯಕ್ಷರಾದ ಪಿ. ಮಹಾಲಿಂಗಯ್ಯ ಎಲ್ಲರನ್ನೂ ಸ್ವಾಗತಿಸಿದರು. ಜಿಲ್ಲಾ ಪ್ರಧಾನ ಕಾಯದರ್ಶಿ ಶ್ರೀ ಬಿ. ಚನ್ನೇಗೌಡ ಕಾರ್ಯಕ್ರಮವನ್ನು ನಿರೂಪಿಸಿದರು.

ಈ ಸಂದರ್ಭದಲ್ಲಿ ಜಿಲ್ಲೆಯ ತಾಲ್ಲೂಕುಗಳ ಸಂಘದ ಘಟಕಗಳನ್ನು ರಚಿಸಲಾಯಿತು. ●

# ಶೈಕ್ಷಣಿಕ ಪ್ರವಾಸ

ಪ್ರತಿ ವರ್ಷದಂತೆ ಈ ವರ್ಷವೂ ಸಹ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲಾ ಘಟಕವು 8 ದಿನಗಳ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿತ್ತು. ಬೆಂಗಳೂರಿನ ಎರಡೂ ಜಿಲ್ಲೆಗಳ 56 ಜನ ಶಿಕ್ಷಕ, ಶಿಕ್ಷಕಿಯರು ಈ ಪ್ರವಾಸದಲ್ಲಿ ಭಾಗವಹಿಸಿದ್ದರು. ಶಿಕ್ಷಕ ಸಂಘದ ಕಾರ್ಯದಲ್ಲಿ ಕಾರ್ಯಕರ್ತರು ಭಾಗವಹಿಸಲು ಮನೆಯವರ ಪ್ರೋತ್ಸಾಹವೂ ಅಗತ್ಯ ಎಂಬುದನ್ನು ಅರಿತ ಸಂಘ, ಈ ದಿಶೆಯಲ್ಲಿ ಮನೆಯವರು ಪಾಲ್ಗೊಳ್ಳಲು ಅವಕಾಶ ನೀಡಿತ್ತು. ಅದರಂತೆ 6 ಶಿಕ್ಷಕ ದಂಪತಿಗಳು, ಮೂರು ಮಕ್ಕಳೂ ಸೇರಿದಂತೆ ಒಟ್ಟು 56 ಶಿಕ್ಷಕರು ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು.

ಡಿಸೆಂಬರ್ 23 ರ ಸಂಜೆ ಆರಂಭವಾದ ಈ ಪ್ರಯಾಣವು ಬಿಜಾಪುರ, ಪಂಡರಾಪುರ, ತುಳುಜಾಪುರ , ಔರಂಗಾಬಾದ್, ಎಲ್ಲೋರ, ಅಜಂತ, ಗುಹಾಂತರ ದೇವಾಲಯ ಮತ್ತು ಪ್ರೇಕ್ಷಣೀಯ ಸ್ಥಳಗಳ ಮೂಲಕ ಐತಿಹಾಸಿಕ ಮುಂಬೈ ನಗರ, ಗೇಟ್ ವೇ ಆಫ್ ಇಂಡಿಯ ನೋಡಿ ಬೆಂಗಳೂರಿನತ್ತ ಮುಖ ಮಾಡಿದರು. ಶೈಕ್ಷಣಿಕ, ಚಾರಿತ್ರಿಕ ಹಾಗೂ ಪ್ರವಾಸಿ ತಾಣಗಳನ್ನು ವೀಕ್ಷಿಸುವುದರ ಜೊತೆಗೆ ಶಿಕ್ಷಕ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆಯೂ ಚಿಂತಿಸಲಾಯಿತು. ಮುಂದಿನ ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆಯೂ ಯೋಚಿಸಲು ಅವಕಾಶ ಸಿಕ್ಕಿತು. ಜನವರಿ 1ರ ಬೆಳಗ್ಗೆ ನಾವು ಸುಖ, ಸಂತೋಷದಿಂದ ನಮ್ಮ ನಮ್ಮ ಮನೆಗಳಿಗೆ ಹಿಂತಿರುಗಿದೆವು.

**ವರದಿ : ಸಿದ್ದೇಗೌಡ**

# ಅಭ್ಯಾಸ ವರ್ಗ

**ರಾಮನಗರ:** ದಿನಾಂಕ 05.01.2015ರಂದು ರಾಮನಗರ ಟೌನ್ ಐಜೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ರಾಮನಗರ ಜಿಲ್ಲಾ ಘಟಕವು ಪ್ರೌಢಶಾಲಾ ಶಿಕ್ಷಕರಿಗಾಗಿ ಒಂದು ದಿನದ ಅಭ್ಯಾಸವರ್ಗವನ್ನು ಏರ್ಪಡಿಸಿತ್ತು.

ಆರಂಭದಲ್ಲಿ ಶಿಕ್ಷಕ ಸಂಘದ ಪೋಷಕರಾದ ಹೆಚ್. ನಾಗಭೂಷಣ್ ರವರು ಮಾತನಾಡುತ್ತಾ

**ಅದಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್।**
**ವಿವಿಧಾಶ್ಚ ಪೃಥಕ್ ಚೇಷ್ಟಾ ದೈವ ಚೈವಾತ್ರ ಪಂಚಮಮ್॥**

'ಭಗವದ್ಗೀತೆಯ ಈ ಶ್ಲೋಕದಲ್ಲಿ ಕೃಷ್ಣ ಪರಮಾತ್ಮನು ಒಂದು ಕಾರ್ಯದ ಯಶಸ್ಸಿಗೆ ಬೇಕಾದ 1. ಅಧಿಷ್ಠಾನ 2. ಪೃಥಗ್ವಿಧಮ್ 3. ಪೃದಕೇಷ್ಟಾ 4. ಕರ್ತಾ ಹಾಗೂ 5. ದೈವಬಲ ಐದು ಪ್ರಮುಖ ಸಂಗತಿಗಳನ್ನು ಪ್ರತಿಪಾದಿಸಿದ್ದಾನೆ. ಇದು ಶಿಕ್ಷಕ ಸಂಘದ

# ಗೆಲುವಿನ ಗುಟ್ಟು

ಒಂದು ಸಲ ಸರ್ಕಾರದ ಕಛೇರಿಯೊಂದಕ್ಕೆ ಹೋಗಿದ್ದೆವು. ನಾವು ನೋಡಲು ಹೋಗಿದ್ದ ಮಿತ್ರರೊಂದಿಗೆ ಅವರ ಸ್ನೇಹಿತರೊಬ್ಬರು ಕುಳಿತಿದ್ದರು. ನಮ್ಮ ಮಿತ್ರರು ತಮ್ಮ ಮಿತ್ರರನ್ನು ಪರಿಚಯ ಮಾಡಿಕೊಟ್ಟರು. ಮಾತು ಮುಂದುವರೆದಾಗ ಅವರು ಭೌತಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿ ಪಡೆದುಕೊಂಡಿರುವವರು ಎಂದು ತಿಳಿಯಿತು. ಅವರಂತಯೇ ರಸಾಯನಶಾಸ್ತ್ರ, ಭೂಗರ್ಭ ಶಾಸ್ತ್ರ ಮೊದಲಾದ ಹಲವು ವಿಭಾಗಗಳಲ್ಲಿ ಪದವೀಧರರೂ, ಸ್ನಾತಕೋತ್ತರ ಪದವೀಧರರೂ ಆ ಕಛೇರಿಯಲ್ಲಿ ಗುಮಾಸ್ತರಾಗಿ ಇರುವುದು ತಿಳಿದು ಬಂತು.

ಕೆಲವು ಕಾಲೇಜು ವಿದ್ಯಾರ್ಥಿಗಳನ್ನು ಒಮ್ಮೆ ಸಂಧಿಸಿದೆವು. ಓದು ಮುಗಿಸಿದ ಮೇಲೆ ಏನು ಮಾಡುತ್ತೀರಿ ಎಂದು ಕೇಳಿದೆವು. ಬಹುಮಂದಿ ಗೊತ್ತಿಲ್ಲ ಎಂದು ಉತ್ತರಿಸಿದರು. ಯಾವ ಕೆಲಸ ಸಿಕ್ಕಿದರೂ ಸೇರುತ್ತೇವೆ ಎಂದರು. ಓದಿಗೆ ತಕ್ಕ ಕೆಲಸ ಸಿಗುವುದಿಲ್ಲ ಎಂದರು.

ಇದು ಒಂದು ರೀತಿಯಲ್ಲಿ ಸತ್ಯ. ಪ್ರಾರಂಭದಲ್ಲಿ ಕೆಲಸವೇ ಸಿಗುವುದಿಲ್ಲ. ಸಿಕ್ಕಿದರೂ ಓದಿಗೆ ತಕ್ಕ ಕೆಲಸ ಸಿಗುವುದಿಲ್ಲ ಇದೇ ಸದ್ಯದ ಪರಿಸ್ಥಿತಿ. ಹೀಗಿರುವಾಗ ನಮ್ಮ ನಾಡಿನಲ್ಲಿ ಬಹುಪಾಲು ಯುವಕರು ಏನು ಮಾಡಬೇಕೆಂದಿದ್ದೇವೆ ಎಂದೇ ತಿಳಿಯದೆ ಏನೋ ಮಾಡಿಕೊಂಡಿದ್ದಾರೆ.

ಸುಮಾರು ಇಪ್ಪತ್ತೆರಡನೆಯ ವಯಸ್ಸಿನವರೆವಿಗೆ ಧ್ಯೇಯವಿಲ್ಲದೆ ದಿನಕಳೆಯುತ್ತದೆ. ಇದು ಯಾವ ರೀತಿ ಇದೆಯೆಂದರೆ ರೈಲ್ವೆ ಸ್ಟೇಷನ್ನಿಗೆ ಹೋಗಿ ಅಲ್ಲಿ ನಿಂತಿರುವ ಯಾವುದೋ ಒಂದು ರೈಲಿನಲ್ಲಿ ಹತ್ತಿ, ಎಲ್ಲಿಗೆ ಹೋಗಬೇಕು ಎಂದು ತಿಳಿಯದೆ ಪ್ರಯಾಣ ಮಾಡುವ ವ್ಯಕ್ತಿಯಂತಿರುತ್ತದೆ.

'ಮಾನವ ಜನ್ಮ ದೊಡ್ಡದು' ಎಂದೆಲ್ಲಾ ಹಾಡಿಕೊಳ್ಳುತ್ತೇವೆ. ಆದರೆ ಮಾನವ ಜನ್ಮವನ್ನು ಉಪಯೋಗಿಸಿಕೊಳ್ಳುವುದಿಲ್ಲ. ಮನುಷ್ಯ ನೂರು ವರ್ಷ ಬದುಕುತ್ತಾನೆ ಎಂದಿಟ್ಟುಕೊಳ್ಳೋಣ. ಅದರಲ್ಲಿ ಅರ್ಧ ನಿದ್ದೆಯಲ್ಲಿ ಕಳೆಯುತ್ತದೆ. ಬಾಲ್ಯದಲ್ಲೂ, ವೃದ್ಧಾಪ್ಯದಲ್ಲೂ ಏನನ್ನೂ ಮಾಡಲಾಗುವುದಿಲ್ಲ, ಏನಾದರೂ ಮಾಡಬಹುದಾದರೆ ಅಲ್ಪಸ್ವಲ್ಪ ಉಳಿದ ನಡುವಿನ ಕಾಲದಲ್ಲಿ ಮಾತ್ರ ಎಂಬುದು ನಿರ್ಣಯಿಸಿಹೋಗಿರುವ ವಿಷಯ. ಅಲ್ಪಸ್ವಲ್ಪ ಕಾಲವನ್ನಾದರೂ ಉಪಯೋಗಿಸಿಕೊಂಡು ಬದುಕಬೇಡವೇ? ಹಿರಿಯರೊಬ್ಬರು ನಮ್ಮ ಈ ಬದುಕನ್ನು 'ಕಬಡ್ಡಿ' ಆಟದಲ್ಲಿ ಉಸಿರು ಹಿಡಿದು ಮುಂದುವರಿಯುವವನಿಗೆ ಹೋಲಿಸಿದರು. ಒಂದೆರಡು ನಿಮಿಷ ಮಾತ್ರ ಅವನಿಗುಂಟು, ಅದರೊಳಗೆ ಯಶಸ್ವಿಯಾಗಿ ಕೆಲವರನ್ನು ಮುಟ್ಟಿಬಿಟ್ಟು ಬಂದುಬಿಡಬೇಕು. ವ್ಯರ್ಥ ಮಾಡಲು ಒಂದು ಕ್ಷಣವೂ ಇಲ್ಲ. ಏನಾದರೂ ಸಾಧಿಸಿ ಹಿಂತಿರುಗಬೇಕು. ಇಲ್ಲದಿದ್ದರೆ ಹೋದದ್ದು ಹೋದಂತೆಯೇ.

ಆದ್ದರಿಂದ ನಮ್ಮ ಗೇಣುಹೊಟ್ಟೆಗಾಗಿ ಮಾಡುವ ಸಾಮಾನ್ಯ ಕೆಲಸ ಕಾರ್ಯಗಳೊಂದಿಗೆ ಯಾವುದಾದರೂ ಒಂದು ಲಕ್ಷ್ಯವನ್ನು, ಮಹತ್ತಾದ ಒಂದು ಗುರಿಯನ್ನು ಆರಿಸಿಕೊಳ್ಳಬೇಕು. ಚಿಕ್ಕ ವಯಸ್ಸಿನಲ್ಲೇ ಈ ಆಯ್ಕೆ ಆಗಿಬಿಡಬೇಕು. ಕಾಲ ತಳ್ಳಬಾರದು.

ಯಾವುದಾದರೂ ಒಂದು ಕಲೆಯಲ್ಲಿ ಪರಿಣಿತಿ ಪಡೆಯಲು ಸುಮಾರು ಹದಿನೈದು ಇಪ್ಪತ್ತು ವರ್ಷಗಳೇ ಬೇಕಾಗುತ್ತದೆ. ಮಿತ್ರರೊಬ್ಬರು ಹತ್ತು ವರ್ಷಗಳವರೆವಿಗೆ ಮೃದಂಗ ಕಲಿತರು; ನಿಪುಣತೆ ಪಡೆಯುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು ಎಂದರು. ಆಗ ಮಾತ್ರ 'ದಡಸೇರಿದವ' ಆಗಬಹುದು.

ಮೊದಲು ಗುರಿಗಳನ್ನು ಇಟ್ಟುಕೊಂಡು ಮನಸ್ಸನ್ನು ಎತ್ತೆತ್ತಲೋ ಹರಿಯಲುಬಿಡಬಾರದು. ಗೆಳೆಯರೊಬ್ಬರು ಎಷ್ಟೋ ವಿಷಯಗಳನ್ನು ಕೈಗೆ ತೆಗೆದುಕೊಂಡು ಮುಟ್ಟೆ ಮುಟ್ಟಿಬಿಟ್ಟರು, ಯಾವುದರಲ್ಲೂ ಪೂರ್ಣಜ್ಞಾನ ಬರಲಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರು ಹೇಳಿದಂತೆ ನೂರು ಸ್ಥಳಗಳಲ್ಲಿ ನೀರಿಗಾಗಿ ಒಂದೊಂದು ಅಡಿ ತೋಡಿದವರು ಅವರು, ನೀರು ಸಿಗಲಿಲ್ಲ ಎಂದು ಬೇಸರಿಸಿಕೊಂಡವರು. ಇದಕ್ಕೆ ಬದಲಾಗಿ ಒಂದೇ ಸ್ಥಳದಲ್ಲಿ ಆಳವಾಗಿ ತೋಡಿದ್ದರೆ?

ಅದೇ ರೀತಿ ಒಂದು ಗುರಿಯನ್ನು, ಒಂದೇ ಗುರಿಯನ್ನು ಚಿಕ್ಕ ವಯಸ್ಸಿನಲ್ಲಿಯೇ ಆರಿಸಿಕೊಂಡು ಅದರಲ್ಲಿ ನಿಪುಣನಾಗಲು ಪ್ರಯತ್ನಿಸುವುದು ಅಗತ್ಯ. ಒಂದು ಹುಟ್ಟಿನಲ್ಲಿ ಒಂದು ಕಾರ್ಯವನ್ನು ಮಾಡಲು ಸಾಧ್ಯ ಉಳಿದವುಗಳನ್ನೆಲ್ಲಾ ಪಕ್ಕಕ್ಕೆ ಸೇರಿಸಿಬಿಡಬೇಕು.

**'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ'**– ಆತ್ಮ ಬಿಡುಗಡೆ ಹೊಂದಲು ಮತ್ತು ಲೋಕಹಿತಕ್ಕಾಗಿಯೂ ಇದೊಂದೇ ಅತ್ಯುತ್ತಮ ಗುರಿ.

**– ರಾಮಗೋಪಾಲನ್**

**ಅನುಕರಣೆ ಎಂದಿಗೂ ಪ್ರಗತಿಯ ಗುರುತಲ್ಲ.**

# ಮಹಿಳಾ ವಿಭಾಗದಿಂದ ಜೀವನಮೌಲ್ಯಗಳ ಅನಾವರಣ

'ನದಿಗಳ ಉಗಮ, ಹರಿವು ಭಿನ್ನವಿರಬಹುದು. ಆದರೆ, ಕಡಲನ್ನು ಸೇರುವುದೊಂದೇ ಅವುಗಳ ಗುರಿ. ಹಾಗೆಯೇ, ನಮ್ಮ ಭಾರತೀಯ ಸಂಸ್ಕೃತಿಯ ಹರಿಕಾರರೆಲ್ಲರ ಚಿಂತನೆ ನಡೆದಿರುವುದು ಒಂದೇ ಸತ್ಯದ ಕಡೆಗೆ. ಸಾಧು– ಸಂತರಾಗಲಿ, ಧರ್ಮ ಸಂಸ್ಥಾಪಕರಾಗಲಿ, ವಚನಕಾರರಾಗಲಿ, ಹರಿದಾಸರಾಗಲಿ, ಶಿಕ್ಷಣತಜ್ಞರು, ಸಮಾಜ ಸುಧಾರಣೆಯ ಗುರಿ ಹೊಂದಿದ ಯಾರೇ ಚಿಂತಕರಾಗಲಿ ಎಲ್ಲರ ಮಾತೊಂದೆ. ಅದೇ "ಏನಾದರೂ ಆಗು ಮೊದಲು ಮಾನವನಾಗು" ಎಂಬ ಸಾರ್ವಕಾಲಿಕ ಸತ್ಯ. ಹೀಗೆಂದು ಹೇಳುತ್ತ ಜೀವನ ಮೌಲ್ಯಗಳ ಮೊದಲ ಪಾಠವನ್ನು ವಿವರಿಸಿದ್ದರು ಡಾ. ಕಪಿಲಾ ಶ್ರೀಧರ್.

ದಿನಾಂಕ: 3.01.2015 ರಂದು ಚನ್ನಕೇಶವ ನಗರದ. ಜಿ.ಕೆ ಲೇಔಟ್‌ನಲ್ಲಿರುವ ಸುಜನಾ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಅರವತ್ತು ಮಂದಿ ಶಿಕ್ಷಕರು ಪಾಲ್ಗೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಬಂದಿದ್ದ ಡಾ॥ ಕಪಿಲಾ ಶ್ರೀಧರ್ ಶಿಕ್ಷಕರಲ್ಲಿ ನಿರಂತರ ಕಲಿಕೆಯ ದಾಹ ಎಷ್ಟು ಮುಖ್ಯವೋ ಅಂತರ್ ಪರಿವೀಕ್ಷಣೆ ಕೂಡ ಅಷ್ಟೇ ಮುಖ್ಯವೆಂದರು. ಹಾಗಾದಾಗ ಮಾತ್ರವೇ ಶಿಕ್ಷಕರಾದವರು ತಮ್ಮ ವ್ಯಕ್ತಿತ್ವವನ್ನೂ ಸದೃಢ ಗೊಳಿಸಿಕೊಂಡು ವಿದ್ಯಾರ್ಥಿಗಳೆದುರಿಗೆ ಆದರ್ಶ ವ್ಯಕ್ತಿಯಾಗಿ ಮಾರ್ಗದರ್ಶನ ಮಾಡಲು ಸಾಧ್ಯವೆಂದರು. ಸಮಯೋಚಿತವಾಗಿ ಕನ್ನಡದ ಕವಿ ಗೀತೆಗಳನ್ನು, ಹರಿದಾಸರ ಕೀರ್ತನೆಗಳನ್ನು, ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತ ತಾವು ತಿಳಿಸುತ್ತಿದ್ದ ವಿಷಯಕ್ಕೆ ಪೂರಕವಾಗಿ ಬಳಸಿಕೊಂಡು ಕಾರ್ಯಕ್ರಮದಲ್ಲಿ ಏಕತಾನತೆ ಬಾರದಂತೆ ನೋಡಿಕೊಂಡಿದ್ದರು.ಆ ಮೂಲಕ ಒಂದು ಆತ್ಮೀಯ ವಾತಾವರಣವನ್ನು ನಿರ್ಮಿಸಿ ಶಿಕ್ಷಕರು ತಮ್ಮ ಅನಿಸಿಕೆಗಳನ್ನು ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳುವಂತೆ ಮಾಡಿದ್ದರು.

ಶಿಕ್ಷಕರಿಗೆ ಕೆಲವು ವಿಶಿಷ್ಟ ಪರೀಕ್ಷೆಗಳನ್ನು ನೀಡಲಾಯಿತು. ಮೊದಲಿಗೆ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನಿರೀಕ್ಷಿಸುವ ಗುಣಗಳು (ಮೌಲ್ಯಗಳು) ಯಾವುವೆಂದು ಕೇಳಿದ್ದರು. ಉತ್ತರವಾಗಿ ಪ್ರಾಮಾಣಿಕತೆ, ವಿನಯ, ಶ್ರದ್ಧೆ, ಸಹನೆ, ಶಿಸ್ತು ಇತ್ಯಾದಿ ಶಿಕ್ಷಕರು ಹೇಳಿದ್ದರು. ನಂತರದಲ್ಲಿ ಪ್ರತಿಯೊಬ್ಬರೂ ಆ ಒಂದೊಂದು ಗುಣವನ್ನೂ ಆಯ್ಕೆ ಮಾಡಿಕೊಂಡು ಅದನ್ನು ತಮಗೆ ನಾಮಕರಣ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು. ಹಾಗೆ ತಮ್ಮದಾಗಿಸಿಕೊಂಡ ಹೆಸರು ತಮಗೆ ಎಷ್ಟು ಅನ್ವರ್ಥವೆಂದು ವಿಶ್ಲೇಷಿಸಿಕೊಳ್ಳುವಂತೆ ಹೇಳಲಾಯಿತು. ಈ ಬಗೆಯ ಸ್ವಯಂ ಪರೀಕ್ಷೆ ಮಾಡಿಕೊಳ್ಳುತ್ತ ಶಿಕ್ಷಕರು ತಮ್ಮ ವ್ಯಕ್ತಿತ್ವವನ್ನು ಸದೃಢಗೊಳಿಸಿಕೊಂಡಾಗಲಷ್ಟೇ ವಿದ್ಯಾರ್ಥಿಗಳಲ್ಲಿ ಕೂಡ ಆ ಗುಣಗಳನ್ನು ನಿರೀಕ್ಷಿಸಲು ಅರ್ಹರಾಗುತ್ತಾರೆಂಬ ಅರಿವು ಮೂಡಿಸಿದ್ದರು. ಡಾ॥ ಕಪಿಲಾ.

ಇತಿಹಾಸ, ಸಮಾಜಶಾಸ್ತ್ರ, ವಿಜ್ಞಾನ, ಕಲೆ ಸಾಹಿತ್ಯ ಯಾವುದೇ ವಿಷಯವಾದರೂ ಶಿಕ್ಷಕರು ತಮ್ಮಲ್ಲಿನ ಸಕಾರಾತ್ಮಕ ಮನೋಭಾವದಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ ಗಟ್ಟಿಗೊಳಿಸಲು ಆ ಮೂಲಕ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆ ತರಲು ಸಾಧ್ಯವಾಗುತ್ತದೆಂದು ಅವರು ತಿಳಿಸಿದರು. ವಿದ್ಯಾರ್ಥಿಗಳೊಂದಿಗೆ ಶಿಕ್ಷಕರ ಸಂಬಂಧ ಸದಾ ಸೌಹಾರ್ದಯುತವಾಗಿರಬೇಕೆಂದೂ, ದಂಡಿಸುವ ಪದ್ಧತಿ ಬೋಧನೆಯಲ್ಲಿ ಖಂಡಿತಾ ಕೂಡದೆಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಲ್ಲಿ ಜ್ಞಾನದಾಹವನ್ನು ಹೆಚ್ಚಿಸುವಂತಹ ಪ್ರೇರಣಾಶಕ್ತಿ ಶಿಕ್ಷಕರಿಗೆ ಅಗತ್ಯವೆಂದರು.

ಶಿಬಿರಾರ್ಥಿಗಳೊಂದಿಗೆ ಡಾ॥ ಕಪಿಲಾ ತಮ್ಮ ಆತ್ಮೀಯತೆಯೊಂದಿಗೆ ಹಿತಕರವಾದ ಹಾಗೂ ಪ್ರಬುದ್ಧವೂ ಆದ ಭಾಷೆಯನ್ನು ಬಳಸುತ್ತಾ ತಾವು ಹೇಳುವ ವಿಷಯಗಳನ್ನು ಅವರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು. ವಿದ್ಯಾರ್ಥಿಗಳಿಗೆ ಜೀವನ ಮೌಲ್ಯಗಳನ್ನು ಬೋಧಿಸುತ್ತ ವ್ಯಕ್ತಿತ್ವ ಬೆಳವಣಿಗೆ ಮಾಡುವಲ್ಲಿ ಶಿಕ್ಷಕರು ಗಮನಿಸಬೇಕಾದ ಪ್ರಾಥಮಿಕ ಹಂತದಿಂದಲೂ ಅಂದರೆ, 'ನುಡಿದಂತೆ ನಡೆಯಿರಬೇಕು' ಎಂಬ ಮೊದಲ ಹೆಜ್ಜೆಯಿಂದಲೂ ಅವರು ಮೂಡಿಸಿದ ಜಾಗೃತಿ ಎಲ್ಲರ ಮೆಚ್ಚುಗೆಯನ್ನು ಪಡೆದಿತ್ತು.

ಭೋಜನ ವಿರಾಮದ ನಂತರ 'ದಿಶಾ ಸಂಘಟನೆಯ ಶ್ರೀ ಪ್ರದೀಪ್ ರವರು ವಿಡಿಯೋ ಪ್ರದರ್ಶನದ ಮೂಲಕ "ಶಿಕ್ಷಕನಿಂದ ಗುರುವಿನವರೆಗೆ ಪಯಣ" ಎಂಬ ಶೀರ್ಷಿಕೆಗೆ ಸಂಬಂಧಿಸಿದ ವಿವರಣೆಯನ್ನು ತುಂಬ ಅಚ್ಚುಕಟ್ಟಾಗಿ ನೀಡಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿಡಿಯೋ ಪ್ರದರ್ಶನದ ತುಣುಕುಗಳು ಶಿಬಿರಾರ್ಥಿಗಳ ಮನಸ್ಸಿನ ಮೇಲೆ ಅಪೇಕ್ಷಿಸಿದಂತೆ ಉತ್ತಮ ಪರಿಣಾಮವನ್ನು ಬೀರುವಲ್ಲಿ ಯಶಸ್ವಿಯಾದವು.

ಸುಜನ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಲೋಕೇಶ್ ಎಲ್ಲರಿಗೆ ಸ್ವಾಗತವನ್ನು ನೀಡಿದ್ದು, ಶ್ರೀಮತಿ ರೇವತೀ ದೇವಿ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟಿದ್ದರು. ಶಿಕ್ಷಕ ಸಂಘಟನೆಯ ಧ್ಯೇಯೋದ್ದೇಶಗಳೊಂದಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪರಿಚಯವನ್ನು ಇದುವರೆಗಿನ ಅದರ ಸಾಧನೆಗಳನ್ನು ಶ್ರೀಮತಿ ಬಿ.ಕೆ ವರಲಕ್ಷ್ಮಿ ಸಂಕ್ಷಿಪ್ತವಾಗಿ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸೀತಾಲಕ್ಷ್ಮಿ 'ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ' ವೆಂಬ ಸಂಘಟನೆಯ ಮೂಲ ಪುರುಷರಾದ ಶ್ರೀ ಮುಕುಂದ ರಾವ್ ಕುಲಕರ್ಣಿಯವರ ಪರಿಶ್ರಮವನ್ನು ಸ್ಮರಿಸುತ್ತ ಶಿಕ್ಷಕ ಸಂಘವು ಪ್ರಾರಂಭದಿಂದ ನಡೆದು ಬಂದ ದಾರಿಯನ್ನು ಪರಿಚಯಿಸುವುದಲ್ಲದೆ ಸಾಧಿಸಿದ ಅಂಶಗಳನ್ನು ವಿವರಿಸಿ, ಮುಂದಿನ ಗುರಿ ಸಾಧನೆಗೆ ಎಲ್ಲ ಶಿಕ್ಷಕ ವೃಂದದ ಸಹಕಾರವನ್ನು ಕೋರಿದರು. ನಾಗಲಕ್ಷ್ಮಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಿತು.

**ವರದಿ : ಸಹನಾ**

**ಮೊದಲು ಆಳಾಗುವುದನ್ನು ಕಲಿಯಿರಿ. ಆಗ ನಾಯಕನ ಅರ್ಹತೆ ಬರುತ್ತದೆ.**

# ವಿದ್ಯಾರ್ಥಿ ಮಿತ್ರ – 15





## 1. ಈ ಪತ್ರಿಕೆಗಳು ಯಾವ ಭಾಷೆಯಲ್ಲಿ ಪ್ರಕಟವಾಗುತ್ತವೆ ಹೇಳಬಲ್ಲಿರಾ ?

1. ಜುಗಾಂತರ
2. ಪ್ರತಾಪ
3. ಮಾತೃಭೂಮಿ
4. ನಯಿ ದುನಿಯಾ
5. ಮಹಾರಾಷ್ಟ್ರ ಟೈಂಸ್
6. ಹಿಂದು
7. ಆನಂದ ಬಜಾರ್
8. ವಿಶ್ವಾಮಿತ್ರ
9. ಸ್ಟೇಟ್ಸ್ ಮನ್
10. ನವಭಾರತ್ ಟೈಂಸ್


## 2. ಈ ಬಿರುದುಗಳನ್ನು ಪಡೆದಿರುವ ಸ್ಥಳಗಳ ಹೆಸರುಗಳನ್ನು ಹೇಳಬಲ್ಲಿರಾ ?

1. ಭಾರತದ ನಂದನವನ
2. ಭಾರತದ ಬಾಲಿವುಡ್
3. ಗುಲಾಬಿ ನಗರ
4. ಮಕ್ಕಳ ನಂದನವನ
5. ಪಂಚ ನದಿಗಳ ಭೂಮಿ
6. ಸೂರ್ಯೋದಯದ ನಾಡು
7. ಪಚ್ಚೆ ಬಣ್ಣದ ದ್ವೀಪ
8. ಮಧ್ಯ ಯೂರೋಪಿನ ರಾಣಿ
9. ದೇವಾಲಯಗಳ ಭೂಮಿ
10. ಗಗನ ಚುಂಬಿ ನಗರ

## 3. ಭಾರತದ ಈ ವಿಜ್ಞಾನಿಗಳನ್ನು ಗುರುತಿಸಬಲ್ಲಿರಾ ?


1


2


3


4

## ವಿದ್ಯಾರ್ಥಿ ಮಿತ್ರ – 14 ರ ಉತ್ತರ

**1. ರಸಪ್ರಶ್ನೆ :**

1. ಡಾ.ವಿ.ಕೃ.ಗೋಕಾಕ್ ; 2. ಅಕ್ಟೋಬರ್ 31, 2008 ; 3. ತೆಲುಗು ; 4. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್; 5. ಕೇಶಿರಾಜ ; 6. ಭಾಮಿನೀ ಷಟ್ಪದಿ ; 7. ಕುಮಾರವ್ಯಾಸ ; 8. ಟಿ.ಪಿ.ಕೈಲಾಸಂ ; 9. ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣ ; 10. ಟಿ.ಪಿ.ಕೈಲಾಸಂ ; 11. ಗಿರೀಶ್ ಕಾರ್ನಾಡ್ ; 12. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ; 13. ಹರಿಯಾಣ ; 14. ಡಾ.ವಿ.ಕೃ.ಗೋಕಾಕ್ ; 15. ಸ್ವಾಮಿ ಜಗದಾತ್ಮಾನಂದ ; 16. ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು ; 17. ಬಿ. ಜಿ. ಎಲ್. ಸ್ವಾಮಿ ; 18. ಕೆ.ಎಸ್.ನಿಸಾರ್ ಅಹಮದ್ ; 19. ಅತ್ತಿಮಬ್ಬೆ ; 20. ನಾಗಚಂದ್ರ

**2. ಇವುಗಳು ಯಾವ ದೇಶಗಳ ನಕ್ಷೆಗಳೆಂದು ಹೇಳಬಲ್ಲಿರಾ ?**

1. ಜಪಾನ್ ; 2. ಆಸ್ಟ್ರೇಲಿಯಾ ; 3. ಚಿಲಿ ; 4. ಶ್ರೀಲಂಕ

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು



# ಸಾಧಕರನ್ನು ಸ್ಮರಿಸೋಣ

ಪ್ರಾಚೀನ ಕಾಲದಿಂದ ಇಂದಿನವರೆಗೂ, ಭಾರತ ಸಾಧಕರ ಬೀಡು. ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ಸಂಸ್ಕೃತಿ ಹೀಗೆ ಹಲವು ಕ್ಷೇತ್ರಗಳಲ್ಲಿ ಅಪಾರ ಸಾಧಕರನ್ನು ಗುರುತಿಸುತ್ತೇವೆ. ಅವರೆಲ್ಲಾ ಸರ್ವಾಂಗೀಣವಾಗಿ ದೇಶವನ್ನು ಶ್ರೀಮಂತವಾಗಿಸಿದ್ದಾರೆ. ಮುಂದಿನ ಸಾಧಕರಿಗೆ ಸ್ಫೂರ್ತಿದಾಯಕರೂ, ಮಾರ್ಗದರ್ಶಕರೂ ಆಗಿದ್ದಾರೆ. ಬನ್ನಿ ಆ ದಿಸೆಯಲ್ಲಿ ಪುಷ್ಯ– ಮಾಘ ಮಾಸಗಳಲ್ಲಿ ಜನಿಸಿದ ಸಾಧಕರನ್ನು ಸ್ಮರಿಸೋಣ.

**ಪುರಂದರ ದಾಸರು:** 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ತಮ್ಮ ಗುರುಗಳಿಂದಲೇ ಹೊಗಳಿಸಿಕೊಂಡ ದಾಸ ಶ್ರೇಷ್ಠರು. ಕರ್ನಾಟಕ ಸಂಗೀತ ಪಿತಾಮಹರೂ ಹೌದು. 1484ರ ಸುಮಾರಿನಲ್ಲಿ ಜನನ. ಪ್ರತಿವರ್ಷ ಪುಷ್ಯ ಬಹುಳ ಅಮಾವಾಸ್ಯೆಯಂದು ಪುರಂದರದಾಸರ ಆರಾಧನೆಯನ್ನು ನಾಡಿನಾದ್ಯಂತ ಆಚರಿಸಲಾಗುತ್ತದೆ. ಈ ವರ್ಷ ಜನವರಿ 20 ಪುರಂದರದಾಸರ ಆರಾಧನೆ.

ಪುರಂದರದಾಸರಾಗುವ ಮುನ್ನ ಶ್ರೀನಿವಾಸನಾಯಕರಾಗಿದ್ದ ಅವರು ಆಗರ್ಭ ಶ್ರೀಮಂತರು. ಆದರೂ ಯಾರಿಗೂ ಒಂದು ಕಿಲುಬುಕಾಸನ್ನೂ ಕೈಎತ್ತಿ ಕೊಟ್ಟವರಲ್ಲ. ದೈವ ಚಿತ್ತ ಇದ್ದರೆ ಏನೂ ಆಗಬಹುದಲ್ಲವೇ? ಅಂತೆಯೇ ಶ್ರೀನಿವಾಸ ನಾಯಕರ ಜೀವನದಲ್ಲೂ ಆದದ್ದು. ಮೂಗುತಿಯ ಘಟನೆಯು ಅವರಿಗೆ ದೈವಶಕ್ತಿ, ಶ್ರದ್ಧೆಯನ್ನು ಮೂಡಿಸಿತು. ಅಷ್ಟೇ ಅಲ್ಲ, ಅವರು ಜೀವನವನ್ನು ಕಾಣುವ ದೃಷ್ಟಿಯನ್ನು ಪೂರ್ಣವಾಗಿ ಬದಲಿಸಿತು. ಅತಿ ಜುಗ್ಗನೆನಿಸಿದ್ದವರು ಥಟ್ಟಂತೆ ಬದಲಾಗಿ ವೈರಾಗ್ಯ ತಾಳಿದರು. ಬಿಡುಗಾಸೂ ತಮ್ಮಲ್ಲಿಟ್ಟುಕೊಳ್ಳಲಿಲ್ಲ. ಅಷ್ಟೇ ಅಲ್ಲ, ದಾಸರಾಗಿ ಪರಿವರ್ತಿತರಾಗಿ ವಿಠಲನ ಮಹಿಮೆಯನ್ನು ಕೀರ್ತನೆಗಳ ಮೂಲಕ ಸಾರುತ್ತಾ ಸಮಾಜದ ಅಂಕುಡೊಂಕುಗಳನ್ನು, ಲೋಪ ದೋಷಗಳನ್ನು ತಿದ್ದಲು ಪ್ರಯತ್ನಿಸಿದವರು. ನೈಜ ಭಕ್ತಿಯ ಪ್ರತಿಪಾದನೆಗೆ ಪ್ರಯತ್ನಿಸಿದವರು. ಸಮಾಜದಲ್ಲಿ ನೀತಿ ಸದಾಚಾರಗಳು ನೆಲೆಗೊಳ್ಳುವ ಕೀರ್ತನೆಗಳು ಸಂಗೀತದ ಅಲೆಗಳ ಮೂಲಕ ಈಗಲೂ ರಿಂಗಣಿಸುತ್ತಿದೆ. ಡಾಂಭಿಕ ಭಕ್ತಿಯ ಪರಿಯನ್ನು ಪುರಂದರದಾಸರು 'ನಮ್ಮ ಪದುಮನಾಭನಲಿ ವೇಶ ಭಕುತಿಯಿಲ್ಲ' ಉದರ ವೈರಾಗ್ಯವೆಂದು ಹಾಸ್ಯ ಮಾಡಿದ್ದಾರೆ. ಹಾಗಾದರೆ ನಿಜವಾದ ವೈರಾಗ್ಯವು ಅವರೇ ಹೇಳುವಂತೆ "ನಾನು ಎಂಬುದು ಬಿಟ್ಟು ಜ್ಞಾನಿಗಳೊಡನಾಡಿ। ಏನಾದರೂ ಹರಿ ಪ್ರೇರಣೆಯೆಂದು ॥ ಧ್ಯಾನಿಸಿ ಮೌನದಿ ಪುರಂದರ ವಿಠಲ" ನನ್ನು ಕಾಣುವುದು.

ಸಮಾಜದಲ್ಲಿ ಹೇಗಿದ್ದರೂ ಕೆಲವೊಮ್ಮೆ ಕಷ್ಟವಾಗುತ್ತದೆ. ಈ ಸಂದಿಗ್ಧತೆಯನ್ನು ಪುರಂದರದಾಸರು ಹೀಗೆ ಹೇಳುತ್ತಾರೆ. 'ಮಾತುಗಳಾಡದೆ ಮೌನದಿಂದಿದ್ದರೆ। ಭೂತ ಬಡೆದವನೆಂದು ಕರೆಯುವರು॥ ಔಚಿತ್ಯದಿಂದಲಿ ಮಾತುಗಳಾಡಲು। ಪಿತ್ತೇರಿ ಬಲುಬಾಯಿಬಡಕನೆಂಬುವರಯ್ಯ॥

'ಹೊನ್ನು ಹಣವುಳ್ಳವರ ಬನ್ನಿ ಕುಳ್ಳಿರಿ ಎಂದು ಮನ್ನಿಸುವರಧಿಕ ಸಂಭ್ರಮದಿಂದಲೇ ಉನ್ನತೈಶ್ವರ್ಯ ಎಲ್ಲ ಬಡವ ತಾ ಬರಲು ಕುನ್ನಿ ಹೋಗೆನುತ ಅಟ್ಟುವರ್ ಮೂಢತನದಿ' ಈ ಕೀರ್ತನೆಯ ಮೂಲಕ ದಾಸರು ಸಮಾಜ ಹಣವಂತಕರಿಗೆ ಪ್ರಾಧಾನ್ಯತೆ ಕೊಡುವುದನ್ನು ಟೀಕಿಸಿದ್ದಾರೆ. ಈ ಮನೋಭಾವವನ್ನೂ ದಾಸರು ಅಲ್ಲಗಳೆದು 'ಬಡವನಾದರೆ ಆತ್ಮ ಬಡವನೇ?' ಎಂದು ಖಂಡಿಸಿದ್ದಾರೆ.

ಇಂತಹ ನೂರಾರು, ಸಾವಿರಾರು ಕೀರ್ತನೆಗಳಿಂದ ಪುರಂದರರು ಪ್ರತಿನಿತ್ಯ ನಮ್ಮೆಲ್ಲರ ಮನಗಳಲ್ಲಿ ನೆಲೆಸಿರಬೇಕೆಂಬುದರಲ್ಲಿ ಎರಡು ಮಾತಿಲ್ಲ.

**ಸ್ವಾಮಿ ವಿವೇಕಾನಂದರು:** 1863 ಜನವರಿ 12ರಂದು ಜನನ. 39 ವರ್ಷಗಳ ಅತ್ಯಲ್ಪ ಜೀವಿತಾವಧಿ. ಜಗದ್ವಂದ್ಯರಾದ, ಹಿಂದೆಯೂ ಇಂದೂ ಮುಂದೂ ಪ್ರಪಂಚದಾದ್ಯಂತ ಲಕ್ಷಾಂತರ ಹಿರಿಯ– ಕಿರಿಯರನ್ನೂ ಆಕರ್ಷಿಸುತ್ತಿರುವ ವೀರ ಸನ್ಯಾಸಿ, ವಿಶ್ವವಿಜೇತ, ವಿಶ್ವಮಾನವ ಸ್ವಾಮಿ ವಿವೇಕಾನಂದರು. ಅವರ ಹೆಸರು ಕೇಳಿದರೆ ಮೈ ರೋಮಾಂಚಗೊಳ್ಳುವಷ್ಟು ಪ್ರಭಾವ. ಧೈರ್ಯ, ತ್ಯಾಗ, ರಾಷ್ಟ್ರಪ್ರೇಮಗಳಿಗೆ ಆದರ್ಶಪ್ರಾಯರು. ವಿವೇಕಾನಂದರ ನುಡಿಗಳು ಕೇಳುಗರಲ್ಲಿ ವಿದ್ಯುತ್ ಸಂಚಾರವನ್ನು ಉಂಟು ಮಾಡುತ್ತದೆ.

"ನನಗೆ ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು; ಅವುಗಳು ಅಂತರಾಳದಲ್ಲಿ ಸಿಡಿಲಿನಲ್ಲಿರುವಂತಹ ಸಾಮಗ್ರಿಗಳಿಂದ ಮಾಡಿದ ಮಾನಸಿಕ ಶಕ್ತಿ ನೆಲೆಸಿರಬೇಕು". ಯುವಕರ ಬಗ್ಗೆ ವಿವೇಕಾನಂದರಿಗೆ ಅಪಾರ ವಿಶ್ವಾಸ. ಆದ್ದರಿಂದಲೇ ಅವರು 'ನಮ್ಮ ದೇಶಕ್ಕೆ ಶೂರರು ಬೇಕಾಗಿದ್ದಾರೆ. ಶೂರರಾಗಿ ನೀವು. ಕಲ್ಲಿನ ಬಂಡೆಯಂತೆ ಅಚಲರಾಗಿ ನಿಲ್ಲಿ. ಧೀರರಾಗಿ! ಧೀರರಾಗಿ!' ಎಂದು ಕರೆ ನೀಡಿದರು. 'ಏಳಿ! ಎದ್ದೇಳಿ! ಗುರಿ ಮುಟ್ಟುವವರೆಗೂ ನಿಲ್ಲದಿರಿ! ಎಂದು ಹುರಿದುಂಬಿಸಿದರು.

ಇಂತಹ ಮಹಾನ್ ಸಾಧಕರು ನಮ್ಮೆಲ್ಲರ ಮನದಲ್ಲಿ ಸದಾ ಸ್ಮರಣೀಯರೇ.

**ನೇತಾಜಿ ಸುಭಾಷ್ ಚಂದ್ರಬೋಸ್:** ಜನವರಿ 23 ನೇತಾಜಿಯವರ ಜನ್ಮದಿನ. ಸುಭಾಷ್ ಚಂದ್ರಬೋಸರು ಅಸಾಧಾರಣ, ಅಪ್ರತಿಮ ದೇಶಭಕ್ತರು. ತಮ್ಮದೇ ಆದ ಒಂದು ಸೈನ್ಯವನ್ನು ಕಟ್ಟಿ ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಪಣತೊಟ್ಟ ಧೀಮಂತ.

**ಮಧ್ವಾಚಾರ್ಯರು:** ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಮಧ್ವಾಚಾರ್ಯರು ಆಚಾರ್ಯತ್ರಯರಲ್ಲಿ ಒಬ್ಬರು. ಆಶ್ವಯುಜ ಮಾಸದ ವಿಜಯದಶಮಿ ಇವರ ಜನನ. ಮಧ್ವಾಚಾರ್ಯರು ಲೌಕಿಕ ಕಣ್ಣಿಗೆ ಮರೆಯಾಗಿ ಬದರಿಕಾಶ್ರಮಕ್ಕೆ ತೆರಳಿದ ದಿನವನ್ನೂ–ಮಾಘ ಶುದ್ಧ ನವಮಿ– ಮಧ್ವನವಮಿಯಾಗಿ ಆಚರಿಸಲಾಗುತ್ತದೆ. ಈ ವರ್ಷ ಈ ಆಚರಣೆ ಜನವರಿ 28 ರಂದು.

**ಲಾಲಾಲಜಪತರಾಯ್** : ಲಾಲ್, ಬಾಲ್, ಪಾಲ್ ಎಂದೇ ಖ್ಯಾತರಾದವರಲ್ಲಿ ಲಾಲಾ ಲಜಪತರಾಯ್ ಪ್ರಮುಖರು. ಜನವರಿ 28 ಲಾಲಾರವರ ಜನ್ಮದಿನ.

**ಭೀಷ್ಮದ್ವಾದಶಿ:** ಜನವರಿ 31 ದ್ವಾಪರ ಯುಗದಲ್ಲಿ ನಡೆದ ಮಹಾಭಾರತದ ಘಟನೆಗಳಲ್ಲಿ ಭೀಷ್ಮಾಚಾರ್ಯರ ಪಾತ್ರ ಹಿರಿದು. ಪಾಂಡವ, ಕೌರವರಲ್ಲಿ ಅತ್ಯಂತ ಹಿರಿಯರು. ಪರಮಜ್ಞಾನಿ. ಇಚ್ಛಾಮರಣಿಯಾದ ಬೀಷ್ಮರು ಇಹಲೋಕವನ್ನು ತ್ಯಜಿಸಿದ ದಿನ. ಮಾಘಶುದ್ಧ ದ್ವಾದಶಿ

**ಸರೋಜಿನಿ ನಾಯ್ಡು** : ಭಾರತದ ಕೋಗಿಲೆ ಎಂದೇ ಪ್ರಖ್ಯಾತರು.

**ಛತ್ರಪತಿ ಶಿವಾಜಿ:** ಫೆಬ್ರವರಿ 19 ರಂದು ಜನ್ಮದಿನ. ಮಹಾರಾಷ್ಟ್ರದವರಾದ ಶಿವಾಜಿ ಮೊಘಲರ ದಾಳಿಯನ್ನು ಸಮರ್ಥವಾಗಿ ಎದುರಿಸಿದವನು. ಶಕ್ತಿಗಿಂತ ಯುಕ್ತಿಯೇ ಮೇಲು ಎಂಬಂತೆ ಯುಕ್ತಿಯಿಂದ ವಿರೋಧಿಗಳನ್ನು ಎದುರಿಸಲು ಪ್ರಯತ್ನಿಸಿದವನು. ಶಿವಾಜಿಯ ಧೈರ್ಯ, ದೇಶಭಕ್ತಿಗಳಿಗೆಲ್ಲ ಸ್ಫೂರ್ತಿ, ಪ್ರೇರಣೆ ಅವನ ತಾಯಿ ಜೀಜಾಬಾಯಿ.

ಶ್ರೀಮತಿ ರಂಗನಾಯಕಿ

# ಚಿತ್ರ ಸುದ್ದಿ




ಅನುದಾನಿತ ಶಿಕ್ಷಕರಿಗೆ ಕನ್ನಡ ವೇತನ ಬಡ್ತಿ ನೀಡದೆ ಅನ್ಯಾಯ ಮಾಡುತ್ತಿರುವ ಸರ್ಕಾರಕ್ಕೆ ಧಿಕ್ಕಾರ ಎಂಬ ಪೋಸ್ಟರ್‌ನೊಂದಿಗೆ ಕನ್ನಡ ವಿಶೇಷ ಭತ್ಯೆಗಾಗಿ ವಿಧಾನಸಭೆಯಲ್ಲಿ ಅರುಣ್ ಶಹಾಪುರ್‌ರವರ ನೇತೃತ್ವದಲ್ಲಿ ಹೋರಾಟ ನಡೆಸಲಾಯಿತು.




3–1–15ರ ಮಹಿಳಾ ವಿಭಾಗದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯ ಅತಿಥಿಗಳು



ದಕ್ಷಿಣ ಭಾರತ ಪ್ರವಾಸ ಕೈಗೊಂಡಿದ್ದ ಶಿಕ್ಷಕರು


**JANUARY 2015**
Date of Posting
20th or 21st of every month

Registered No. RNI 45459/85
RNP/KA/BGS-125/2015-2017
Posted at Bangalore GPO
Bangalore -560 001


## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.



srushtidesigns@gmail.com